

Alternatives India VIKALP sangam

Vol. 1 | May 2020

# ‘ಸಾಮಾನ್ಯ’ರ ಅಸಾಮಾನ್ಯ ಸಾಧನೆಗಳು

## ಕೊರೊನಾ ಮಹಾಮಾರಿ ಮತ್ತು ಲಾಕ್‌ಡೌನ್‌ಗಳ ಆಚಿನ ನೋಟ

**ಸಮುದಾಯಗಳಿಗೆ, ಸರಕಾರೇತರ ಸಂಘಟನೆಗಳಿಗೆ ಮತ್ತು ಸರಕಾರಿ ಸಂಸ್ಥೆಗಳಿಗೆ ಉದಾಹರಣೆಗಳು, ಪಾಠಗಳು ಮತ್ತು ನಿರ್ದಿಷ್ಟ ಶಿಫಾರಸುಗಳು**

# ಒಳಗಡೆ


ಪ್ರಸ್ತಾವನೆ 01

ಆಹಾರ 03

ಮಾರುಕಟ್ಟೆ 08

ಜೀವನೋಪಾಯ 15

ಆರೋಗ್ಯ 28

ಕೊನೆಯ ಪುಟದಲ್ಲಿ:

ಸಹಭಾಗಿಗಳು, ಆಕರ ಮತ್ತು 'ವಿಕಲ್ಪ ಸಂಗಮ'ದ ಪರಿಚಯ

# ಪ್ರಸ್ತಾವನೆ: ಈ ದಾಖಲೆ ಏತಕ್ಕೆ?

ಮಾರ್ಚ್ ೨೦೨೦ರ ತರುವಾಯ ಕೋವಿಡ್-೧೯ ಮತ್ತು ಅದಕ್ಕೆ ಸಂಬಂಧಿಸಿದ ಸಂಕಟಗಳು ಈ ದೇಶದ ಕೋಟ್ಯಂತರ ಜನರನ್ನು ಬಾಧಿಸಿವೆ. ನಮ್ಮ ದೇಶದ ಶ್ರಮಿಕರಲ್ಲಿ ಶೇಕಡಾ ೯೦ಕ್ಕೂ ಹೆಚ್ಚು ಜನರು ಅಸಂಘಟಿತ ಹಾಗೂ ಅಸಾಂಪ್ರದಾಯಿಕ ವಲಯಕ್ಕೆ ಸೇರಿದವರಾಗಿದ್ದಾರೆ. ಕೃಷಿ, ಮೀನುಗಾರಿಕೆ ಮತ್ತು ಗಣಿಗಾರಿಕೆಯಂಥ ಪ್ರಾಥಮಿಕ ವಲಯದಲ್ಲಿ ಹಾಗೂ ಉತ್ಪಾದನೆಯಲ್ಲಿ ತೊಡಗಿದ ಬಹುಪಾಲು ಜನರು ತಮ್ಮ ಉತ್ಪನ್ನಗಳನ್ನು ಆಯಾ ದಿನ ಮಾರಾಟ ಮಾಡಿಯೇ ಬದುಕನ್ನು ಸಾಗಿಸುವವರಾಗಿದ್ದಾರೆ. ಉತ್ಪಾದನಾ ಘಟಕಗಳನ್ನು ಮುಚ್ಚಿದ್ದರಿಂದ ಹಾಗೂ ಮಾರುಕಟ್ಟೆಗಳೂ ಸ್ಥಗಿತವಾಗಿದ್ದರಿಂದ ಅಂಥವರಿಗೆ ಬದುಕು ದುರ್ಭರವಾಗಿದೆ. ಮನೆಯಿಂದ ದೂರದಲ್ಲಿ ದುಡಿಯಲು ಹೋಗಿರುವ ವಲಸೆ ಕಾರ್ಮಿಕರು ಸಾರಿಗೆ ವ್ಯವಸ್ಥೆಯೂ ಇಲ್ಲದ ಕಾರಣ ಅತ್ಯಂತ ತೀವ್ರ ಸಂಕಟಗ್ರಸ್ತರಾಗಿದ್ದಾರೆ. ಆಹಾರ, ನೀರು, ವಸತಿಯೇ ಮುಂತಾದ ಅಗತ್ಯವಸ್ತುಗಳೂ ಸಿಗದೆ ಕೋಟ್ಯಂತರ ಜನರು ಕಷ್ಟಕ್ಕೆ ಸಿಲುಕಿದ್ದಾರೆ.

ಇಂದಿನ ತುರ್ತುಸಂಕಟಗಳ ನಿವಾರಣೆಗಾಗಿ ಎಲ್ಲರೂ ಕೈಜೋಡಿಸುತ್ತಿದ್ದಾರೆ ನಿಜ. ಸರಕಾರಿ ಇಲಾಖೆಗಳಿಂದ ಹಾಗೂ ಸ್ವಯಂಪ್ರೇರಿತ ಸಂಘಟನೆಗಳಿಂದ ನಾನಾ ಬಗೆಯ ನೆರವು ಸಿಗತೊಡಗಿದೆ. ಆದರೆ ಇಂದಿನ ಈ ಸಮಸ್ಯೆಯ ಮೂಲ ಬೇರು ಎಲ್ಲಿದೆ ಎಂಬುದನ್ನು ನೋಡಿ ಅದಕ್ಕೆ ಉಪಶಮನವನ್ನು ಹುಡುಕುವ ಯತ್ನ ನಡೆದಿಲ್ಲ. ಭಾರತದ ಅರ್ಥವ್ಯವಸ್ಥೆ, ಇಲ್ಲಿನ ಸಮಾಜ ಮತ್ತು ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಅದೆಷ್ಟು ಆಳವಾದ ಬಿರುಕುಗಳಿವೆ ಎಂಬುದನ್ನು ಕೋವಿಡ್ ಸಂಕಟ ಮೇಲೆತ್ತಿ ತೋರಿಸಿದೆ. ಶ್ರಮಿಕವರ್ಗದವರು, ಅವರಲ್ಲೂ ವಿಶೇಷವಾಗಿ ದಲಿತರು, ಆದಿವಾಸಿಗಳು ಮತ್ತು ಮಹಿಳೆಯರು ಅನುಭವಿಸುತ್ತಿರುವ ಪೀಡನೆ ಬೆಳಕಿಗೆ ಬಂದ ತಾಗಿದೆ. ಮೂಲ ಅಗತ್ಯಗಳಿಗಾಗಿ ಅತಿ ದೂರದ ವ್ಯಾಪಾರ ವಿನಿಮಯವನ್ನು ಅವಲಂಬಿಸುವುದು ಅದೆಷ್ಟು ತಪ್ಪು ಹೆಜ್ಜೆ ಎಂಬುದು ಈಗ ಗೊತ್ತಾಗುತ್ತಿದೆ. ಸಾಮಾಜಿಕ ಆರ್ಥಿಕ ದಾರಿದ್ರ್ಯಕ್ಕೂ ಪರಿಸರ ದಾರಿದ್ರ್ಯಕ್ಕೂ ಸಂಬಂಧ ಏನೆಂಬುದು ನಿಚ್ಚಳವಾಗುತ್ತಿದೆ. ಒಟ್ಟಾರೆ ನೋಡಿದರೆ, ಅಭಿವೃದ್ಧಿಯ ಪ್ರಮುಖ ಸೂತ್ರಗಳೆಲ್ಲ ಹೇಗೆ ಅಸಮತೋಲದತ್ತ, ಅಸ್ಥಿರತೆಯತ್ತ ಕೊಂಡೊಯ್ಯುತ್ತಿವೆ ಎಂಬುದು ಕಂಡುಬರುತ್ತಿದೆ.

ಇಂಥ ಸಂದರ್ಭದಲ್ಲಿ ತುರ್ತಾಗಿ ಸಿಗಬೇಕಾದ ನೆರವು ಸಿಗಲೇಬೇಕು ಮತ್ತು ಮರುವಸತಿ ವ್ಯವಸ್ಥೆಯಂತೂ ಆಗಲೇಬೇಕು. ಅದರ ಜೊತೆಗೆ ನಾವು ಇದುವರೆಗೆ ಅನುಸರಿಸಿಕೊಂಡು ಬಂದ ಅಭಿವೃದ್ಧಿಯ ಸೂತ್ರಗಳು ಸರಿ ಇವೆಯೇ ಎಂಬುದರ ಮರುಪರಿಶೀಲನೆ ಮಾಡುವುದೂ ಮುಖ್ಯವಾಗುತ್ತದೆ. ಬದಲೀ ಮಾರ್ಗಗಳನ್ನು ಶೋಧಿಸಬೇಕಾದ ತುರ್ತು ಅಗತ್ಯ ಎದುರಿಗಿದೆ.

# ಪ್ರಸ್ತಾವನೆ: ಈ ದಾಖಲೆ ಏತಕ್ಕೆ?

ಎಲ್ಲರೂ ಮರ್ಯಾದೆಯಿಂದ ಬಾಳಬೇಕು ಮತ್ತು ಪರಿಸರ ಸಮತೋಲವೂ ಸಾಧ್ಯವಾಗಬೇಕು, ಆಹಾರ, ಆರೋಗ್ಯ, ಆಸರೆ, ನೀರು, ಶಕ್ತಿ, ಶಿಕ್ಷಣ ಮತ್ತಿತರ ಮೂಲ ಅಗತ್ಯಗಳನ್ನು ಮತ್ತು ಆಶೋತ್ತರಗಳನ್ನು ಪೂರೈಸಬಲ್ಲ ಸ್ವಾವಲಂಬಿ ಬದುಕಿನ ಸೂತ್ರಗಳು ಬೇಕು. ಗ್ರಾಮೀಣ ಅಷ್ಟೇ ಅಲ್ಲ, ನಗರ ಮತ್ತು ನಗರದಂಚಿನ ಸಮುದಾಯಗಳಿಗೆ ಇವೆಲ್ಲವೂ ಕೈಗೆಟುಕುವಂಥ ಸ್ವಾವಲಂಬನೆಯ ಹಾಗೂ ಸಾಧ್ಯವಿದ್ದಲ್ಲೆಲ್ಲ ಸ್ವಯಂಪೂರ್ಣ ವ್ಯವಸ್ಥೆ ಜಾರಿಗೆ ಬರಬೇಕು. ಹಳ್ಳಿ, ಪಟ್ಟಣ, ನಗರಗಳಿಗಾಗ ಅಂಥದೊಂದು ಬದಲೀ ಮಾರ್ಗ ಜರೂರಾಗಿ ಭಾರತಕ್ಕೂ ಬೇಕಾಗಿದೆ, ಇಡೀ ಜಗತ್ತಿಗೇ ಬೇಕಾಗಿದೆ.

ಇಂಥದ್ದೊಂದು ಸುಸಂಬದ್ಧ ಸಮಾಜ- ಸ್ವರಾಜ್ಯ ನಿರ್ಮಾಣದ ಮಾದರಿಗಳು ಈಗಾಗಲೇ ಭಾರತದ ನೂರಾರು ಸಮುದಾಯಗಳಲ್ಲಿ ರೂಪುಗೊಂಡಿವೆ. ಅಂಥ ಉದಾಹರಣೆಗಳನ್ನು ಇಲ್ಲಿ ಸರಣಿ ದಾಖಲೆಗಳ ಮೂಲಕ ನಾವಿಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ. ಇದು ಇತರರಿಗೂ ಮಾರ್ಗದರ್ಶಿಯಾಗಲಿ, ಈ ಮಾದರಿಗಳನ್ನು ಅನುಸರಿಸಿ ಇಂಥದ್ದೇ ಫಲಿತಾಂಶಗಳನ್ನು ಪಡೆಯಲು ನೆರವಾಗಲಿ ಎಂಬುದೇ ಆಶಯ. ಕೋವಿಡ್-೧೯ರಲ್ಲಿ ಉದ್ಭೂತವಾದ ಸಮಸ್ಯೆಗಳು ಹಿಂದೆಯೂ ದೀರ್ಘಕಾಲದಿಂದ ನಮ್ಮಲ್ಲಿದ್ದವು. ಈಗ ಎದ್ದುಕಾಣುವಂತಾಗಿದೆ ಅಷ್ಟೆ. ಈ ಒಂದೊಂದು ಸಮಸ್ಯೆಗೂ ಪರಿಹಾರವಿದೆ ಎಂಬುದನ್ನು ಅನೇಕ ಸಮುದಾಯಗಳು, ಅನೇಕ ನಾಗರಿಕ ಸಂಘಟನೆಗಳು ಮತ್ತು ಸರಕಾರೀ ಇಲಾಖೆಗಳು ಭಾರತದಲ್ಲೇ ಒಂದಲ್ಲ ಒಂದು ಕಡೆ ಪ್ರತ್ಯಕ್ಷ ತೋರಿಸಿವೆ.

ನೀವಿದನ್ನು ಓದಿ, ಇಲ್ಲಿ ಕಲಿಯಬೇಕಾದ ಸಂಗತಿಗಳೇನಿವೆ ಎಂಬುದನ್ನು ಯಾವುದೇ ಮಾಧ್ಯಮದ ಮೂಲಕ, ಯಾವುದೇ ಭಾಷೆಯಲ್ಲಿ ಇತರರೊಂದಿಗೆ ಹಂಚಿಕೊಳ್ಳಬಹುದು. ಇಂಥ ಬೇರೆಯ ಉದಾಹರಣೆಗಳು ನಿಮಗೆ ಗೊತ್ತಿದ್ದರೆ ನಮಗೂ ತಿಳಿಸಿ!

## ಸಂಪರ್ಕಕ್ಕೆ

ಜೂಹಿ ಪಾಂಡೆ, ಸಮನ್ವಯಗಾರ್ತಿ, studiojuhi@gmail.com, 9820039110

ಇಲ್ಲಿನ ಕಥನಗಳನ್ನು ಅಥವಾ ಅನುಭವಗಳನ್ನು ಇನ್ನಿತರ ಜಾಲತಾಣಗಳಿಗೆ ಅಥವಾ ಸಮುದಾಯಗಳಿಗೆ ವಿತರಿಸಬೇಕೆಂದಿದ್ದರೆ ನೆರವಿಗೆ ಬರಬಲ್ಲವರು:
ಗಿಜ್ ಸ್ಪೂರ್, gijs@auroville.org.in, 9943820241 (only WhatsApp/SMS)

**ಬಿಕ್ಕಟ್ಟು :** ಆಹಾರದ ಅಭದ್ರತೆಯ ಹಳ್ಳಿಗಳು

**ಪರಿಹಾರ :** ಸಮುದಾಯಗಳಿಂದ ಆಹಾರ ಮತ್ತು ಸುರಕ್ಷತೆ



ಚಿತ್ರ: ಆಶೀಷ್ ಕೊಠಾರಿ





ಪಾಸ್ತಾಪುರದಲ್ಲಿ ನರಸಮ್ಮ ಮತ್ತು ಡಿಡಿಎಸ್ ಮಹಿಳೆಯರು (ಎಡಕ್ಕೆ) ಝುಹೀರಾಬಾದ್‌ನ ಸಂಘಮ್ ಸಾವಯವ ಮಳಿಗೆ (ಬಲಕ್ಕೆ)

# ತೆಲಂಗಾಣಾದ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿಯ ದಲಿತ ಮತ್ತು ಆದಿವಾಸಿ ಕೃಷಿಕ ಮಹಿಳೆಯರು

ಇದೊಂದು ಕೃಷಿಕ್ರಾಂತಿಯ ಕಥೆ. ತೆಲಂಗಾಣಾದ ಝುಹೀರಾಬಾದ್ ಜಿಲ್ಲೆಯ ಸಾವಿರಾರು ದಲಿತ ಮತ್ತು ಆದಿವಾಸಿ (ಗೌಳಿ) ಮಹಿಳೆಯರ ಕಳೆದ ೨೫-೩೦ ವರ್ಷಗಳ ಸಾಧನೆ ಇದು. ಅಲ್ಲಿನ ೭೦ಕ್ಕೂ ಹೆಚ್ಚು ಹಳ್ಳಿಗಳ ಒಣಭೂಮಿಯಲ್ಲಿ ಈ ಮಹಿಳೆಯರು ಸಾಂಪ್ರದಾಯಿಕ ಸಿರಿಧಾನ್ಯದ ಬೀಜಗಳನ್ನು ಮತ್ತು ಜಾನುವಾರುಗಳ ವೈವಿಧ್ಯವನ್ನು ಜೋಪಾನವಾಗಿ ಕಾಪಾಡಿಕೊಂಡಿದ್ದಾರೆ. ಅವರದು ಸಂಪೂರ್ಣ ಸಾವಯವ ವಿಧಾನ. ಅವರು ಬಳಸುವ ಒಳಸುರಿಗಳೂ ಸ್ಥಳೀಯವಾಗಿ ಸಿಗುವಂಥವು. ಹಿಂದಿನ ಕಾಲದ ಕೃಷಿ ಪದ್ಧತಿಗಳೆನಿಸಿದ ಮಿಶ್ರಬೇಸಾಯ ಮತ್ತು ಬಹುಬೆಳೆಯ ಪದ್ಧತಿಗಳನ್ನು ಊರ್ಜಿತಕ್ಕೆ ತಂದಿದ್ದಾರೆ. ಬೇಕಾದಾಗ ಸುಲಭಕ್ಕೆ ಸಿಗುವ ಹಾಗೆ ಪ್ರತಿ ಹಳ್ಳಿಯಲ್ಲೂ ಬೀಜನಿಧಿಯನ್ನು ಸ್ಥಾಪಿಸಿದ್ದಾರೆ. 'ಡೆಕ್ಕನ್ ಡೆವಲಪ್ಮೆಂಟ್ ಸೊಸೈಟಿ' (ಡಿಡಿಎಸ್) ಹೆಸರಿನ ಸ್ವಯಂಸೇವಾ ಸಂಸ್ಥೆಯ ನೆರವಿನಿಂದ ಇವೆಲ್ಲ ಸಾಧ್ಯವಾಗಿದೆ. ಮಹಿಳೆಯರ ಹೆಸರಿನಲ್ಲೇ ಜಮೀನು ದಾಖಲೆಗಳು ಇರಬೇಕು ಎಂದು ಹೋರಾಡಿ ಆ ಹಕ್ಕುಗಳನ್ನೂ ಪಡೆದಿದ್ದಾರೆ. ಇವೆಲ್ಲ ಯತ್ನಗಳ ಫಲಿತಾಂಶ ಏನೆಂದರೆ, ಆ ಊರುಗಳಲ್ಲಿ ಆಹಾರದ ಕೊರತೆ ಇಲ್ಲವೇ ಇಲ್ಲ. ಹಾಗಾಗಿ ಕುಪೋಷಣೆಯ ಸಮಸ್ಯೆ ಇಲ್ಲ. ಬಡವರಿಗೆ ಕಡಿಮೆ ದರದಲ್ಲಿ ಸತ್ವಭರಿತ ಆಹಾರ ಲಭಿಸುವಂತೆ ತಮ್ಮದೇ ಸ್ವತಂತ್ರ ಪಡಿತರ ವಿತರಣ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದಾರೆ. ಜೊತೆಗೆ, ಹೈದರಾಬಾದ್ ನಗರದ ೧೦೦ ಕುಟುಂಬಗಳನ್ನು ತಮ್ಮ ಉತ್ಪಾದನೆಗಳ ಗ್ರಾಹಕರನ್ನಾಗಿ ಜೋಡಿಸಿಕೊಂಡಿದ್ದಾರೆ. ಎಲ್ಲಕ್ಕಿಂತ ಮುಖ್ಯ ಸಂಗತಿ ಏನೆಂದರೆ, ಈ ಮಹಿಳೆಯರಿಗೆ ಈಗ ಆತ್ಮಸಮ್ಮಾನ ಸಿಕ್ಕಿದೆ. ಜಾತಿವಾದ, ಲೈಂಗಿಕ ಅಸಮಾನತೆಗಳೇ ತುಂಬಿದ್ದ ಗ್ರಾಮೀಣ ಸಮಾಜದಲ್ಲಿ ಈ ಮಹಿಳೆಯರು ತಲೆಯೆತ್ತಿ ನಿಂತಿದ್ದಾರೆ. ಈ ಎಲ್ಲ ಸಾಧನೆಗಳಿಂದಾಗಿ ಅವರ ಸಂಘಟನೆಗೆ ವಿಶ್ವಸಂಸ್ಥೆಯ 'ಈಕ್ವೇಟರ್ ಪ್ರಶಸ್ತಿ' ಲಭಿಸಿದೆ.

## ಬಿಕ್ಕಟ್ಟು: ಆಹಾರದ ಅಭದ್ರತೆಯ ಹಳ್ಳಿಗಳು

## ಪರಿಹಾರ: ಸಮುದಾಯಗಳಿಂದ ಆಹಾರ ಮತ್ತು ಸುರಕ್ಷತೆ



ಕೋವಿಡ್-೧೯ರ ಸಂಬಂಧ ಲಾಕ್‌ಡೌನ್ ಘೋಷಣೆ ಮಾಡಿದಾಗ ಈ ಮಹಿಳೆಯರ ಯಾವ ಕುಟುಂಬದಲ್ಲೂ ಆಹಾರಕ್ಕೆ ಅಭಾವವಿರಲಿಲ್ಲ. ಅಷ್ಟೇ ಅಲ್ಲ ಅವರು ತಮ್ಮಲ್ಲಿದ್ದುದನ್ನು ಭೂರಹಿತ ಕೃಷಿಕರೊಂದಿಗೆ ಹಂಚಿಕೊಂಡಿದ್ದಾರೆ. ಜಿಲ್ಲಾ ಪರಿಹಾರ ನಿಧಿಗೆ ದೇಣಿಗೆಯನ್ನೂ ಕೊಟ್ಟಿದ್ದಾರೆ. ಝಹೀರಾಬಾದ್ ಪಟ್ಟಣದ ಪುರಸಭೆಯ ಸಿಬ್ಬಂದಿಗೆ, ಆರೋಗ್ಯ ಕಾರ್ಯಕರ್ತರಿಗೆ ಹಾಗೂ ಪೊಲೀಸರಿಗೆ ಪ್ರತಿದಿನವೂ ಸಾವಿರ ಲೋಟ ಸಿರಿಧಾನ್ಯದ ಗಂಜಿಯನ್ನೂ ವಿತರಿಸಿದ್ದಾರೆ.

## ಪಾಠಗಳು

ಹೊರಗಿನ ಅತ್ಯಲ್ಪ ನೆರವು ಸಿಕ್ಕರೂ ಏನೆಲ್ಲ ಸಾಧಿಸಬಹುದು. ಸ್ಥಳೀಯ ಹವಾಗುಣಕ್ಕೆ ತಕ್ಕಂತೆ, ಸ್ಥಳೀಯರ ಅನುಭವವನ್ನು ಆಧರಿಸಿ, ಒಣಭೂಮಿಯಲ್ಲೂ ಫಸಲು ಪಡೆಯಬಹುದು. ಸ್ಥಳೀಯ ಮಾರುಕಟ್ಟೆಯನ್ನೇ ಸೃಷ್ಟಿಸಿಕೊಂಡು ಆಹಾರ ಸ್ವಾವಲಂಬಿಯಾಗಬಹುದು. ಆಹಾರ ಸ್ವಾತಂತ್ರ್ಯ ಮತ್ತು ಆರ್ಥಿಕ ಭದ್ರತೆ ಎರಡೂ ಸಾಧ್ಯವಾಗಬಹುದಾಗಿದೆ. ಭಾರತ ಸರಕಾರದ ಕೃಷಿ ವಿಕಾಸದ ಮಾದರಿಗಳು ಇದಕ್ಕೆ ತದ್ವಿರುದ್ಧವಾಗಿದ್ದು ಅದನ್ನು ಮೂಲಭೂತವಾಗಿ ಬದಲಿಸಬೇಕಾಗಿದೆ.

## ಸಂಪರ್ಕಕ್ಕೆ

ಜಯಶ್ರೀ ಚೆರುಕುರಿ, jayasri.dds@gmail.com

DDS ಜೊತೆ COVID- ಸಮಯದ ಸಂಭಾಷಣೆಯನ್ನೂ ನೋಡಿ
https://vscoronatimes.blogspot.com/2020/04/vikalp-varta-2-self-reliant-village.html

ಚಿತ್ರ: ಆಶೀಶ್ ಕೊಠಾರಿ



ಚಿತ್ರ: ಕೃಪೆ: ಡಿಡಿಎಸ್.



(ಎಡಕ್ಕೆ) ಇಪ್ಪಾಪಲ್ಲಿ ಗ್ರಾಮದಲ್ಲಿ ಡಿಡಿಎಸ್‌ನ ಶಾಮಲಮ್ಮನಿಂದ ಪ್ರಾತ್ಯಕ್ಷಿಕೆ ಕೋವಿಡ್-೧೯ರ ಸಂಕಟಸಮಯದಲ್ಲಿ ಡಿಡಿಎಸ್ ಸದಸ್ಯೆಯರಿಂದ ರಾಗಿ ಗಂಜಿಯ ವಿತರಣೆ (ಬಲಕ್ಕೆ).

**ಬಿಕ್ಕಟ್ಟು:** ಆಹಾರದ ಅಭದ್ರತೆಯ ಹಳ್ಳಿಗಳು

**ಪರಿಹಾರ:** ಸಮುದಾಯಗಳಿಂದ ಆಹಾರ ಮತ್ತು ಸುರಕ್ಷತೆ



ಚಿತ್ರ: ಆಶಿಷ್ ಕೊಠಾರಿ.





ಕೆಡಿಯಾ ಗ್ರಾಮದ ಸಾವಯವ ಕೃಷಿಕ ತನ್ನ ಫಸಲಿನೊಂದಿಗೆ (ಎಡಕ್ಕೆ) 'ಅಮೃತ್‌ಪಾನಿ' ಫಲಕದೊಂದಿಗೆ ಅದೇ ಊರಿನ ಫಸಲು (ಬಲಕ್ಕೆ).

# ಕೆಡಿಯಾ ಸಾವಯವ ಗ್ರಾಮ, ಬಿಹಾರ

ಬಿಹಾರದ ಜಮೂಯಿ ಜಿಲ್ಲೆಯ ಕೆಡಿಯಾ ಗ್ರಾಮದ ೯೭ ರೈತ ಕುಟುಂಬಗಳು ೨೦೧೪ರಲ್ಲಿ ಬದಲೀ ಕೃಷಿ ಪದ್ಧತಿಯೊಂದರ ಶುಭಾರಂಭ ಮಾಡಿದವು. ಅಂದರೆ ಮಾಮೂಲು ರಾಸಾಯನಿಕ ಕೃಷಿಯನ್ನು ಕೈಬಿಟ್ಟು ಸ್ಥಳೀಯ ಸಸ್ಯ ಕೀಟ ಮತ್ತು ಎರೆಹುಳಗಳ ಸಹಾಯದಿಂದ ಮಣ್ಣನ್ನು ಜೀವಂತಗೊಳಿಸಿ ಬೇಸಾಯ ನಡೆಸುವುದು. ಅಲ್ಲಿನ ರೈತರಿಗೆ ಅದು ಮರೆತೇಹೋಗಿತ್ತು. ಕಂಪನಿಗಳು ಪೂರೈಸುವ ರಸಗೊಬ್ಬರ, ಕೀಟನಾಶಕ, ಹೈಬ್ರಿಡ್ ಬೀಜಗಳಿಂದ ಭತ್ತ-ಗೋಧಿಯನ್ನು ಬೆಳೆಯುವ 'ಹಸುರು ಕ್ರಾಂತಿ' ವಿಧಾನ ಭಾರತದ ಎಲ್ಲೆಲ್ಲೂ ವ್ಯಾಪಿಸುತ್ತಿದ್ದಾಗ ಈ ಜನರೂ ಅದಕ್ಕೆ ಶರಣಾಗಿದ್ದರು.

ಇಂದು ಇಲ್ಲಿಯ ರೈತರು 'ಗ್ರೀನ್‌ಪೀಸ್' ಸಂಸ್ಥೆ ಮತ್ತು ರಾಜ್ಯ ಸರಕಾರದ ಕೃಷಿ ಇಲಾಖೆಯ ನೆರವಿನಿಂದ ಬದಲೀ ವಿಧಾನವನ್ನು ಮೆಲ್ಲಗೆ ಜಾರಿಗೆ ತಂದಿದ್ದಾರೆ. ಮೊದಲು ಕೆಲವೇ ಹೊಲಗಳಲ್ಲಿ ಜೀವಂತ ಕೃಷಿ ವಿಧಾನವನ್ನು ಪ್ರಯೋಗಿಸಿ ಕ್ರಮೇಣ ನಾಲ್ಕೈದು ವರ್ಷಗಳಲ್ಲಿ ಎಲ್ಲರ ಜಮೀನನ್ನೂ ಪರಿವರ್ತಿಸಿದರು. ಇಂದು ಅವರು ತಮ್ಮ ಅಗತ್ಯದ ಎಲ್ಲವನ್ನೂ (ಉಪ್ಪು, ಸಕ್ಕರೆ ಎರಡನ್ನು ಬಿಟ್ಟು) ತಾವೇ ಸಾವಯವ ವಿಧಾನದಲ್ಲಿ ಬೆಳೆಯುತ್ತಿದ್ದಾರೆ. ಗ್ರಾಮದ ಆಚೆಯಿಂದ ಯಾವ ಒಳಸುರಿಯನ್ನೂ ತರಿಸುತ್ತಿಲ್ಲ. ಅಲ್ಲಿ ಈಗ ಕೀಟಗಳ ಉಪದ್ರವ ಇಲ್ಲ, ಫಲವತ್ತತೆ ಹೆಚ್ಚಾಗಿದೆ. ತೆರೆದ ಬಾವಿಗಳಲ್ಲಿ ನೀರು ತುಂಬಿದೆ. ಕೊಳವೆ ಬಾವಿಗಳನ್ನೆಲ್ಲ ಮುಚ್ಚಲಾಗಿದೆ. ವರ್ಷವಿಡೀ ಮನೆಬಳಕೆಗೂ ಬೇಸಾಯಕ್ಕೂ ಬೇಕಾದಷ್ಟು ನೀರು ಸಿಗುತ್ತಿದೆ. ಕೃಷಿಕರ ಹಾಗು ಕೃಷಿ ಅಧಿಕಾರಿಗಳ ಮನಸ್ಸು ಬದಲಾಗಿದ್ದೇ ಅಲ್ಲಿನ ಪರಿಸರದ ಬದಲಾವಣೆಗೆ ಕಾರಣವಾಗಿದೆ. ಕೆಡಿಯಾ ಗ್ರಾಮದ ಯಶಸ್ಸಿನಿಂದಾಗಿ ಸರಕಾರದ ಧೋರಣೆಯೂ ಬದಲಾಗಿದೆ. ಪ್ರತಿ ಜಿಲ್ಲೆಯಲ್ಲೂ ಒಂದೊಂದು ಮಾದರಿ ಸಾವಯವ ಗ್ರಾಮಗಳನ್ನು ರೂಪಿಸಬೇಕು;
ಎಲ್ಲ ಹೆದ್ದಾರಿಗಳ ಹಾಗೂ ಗಂಗಾನದಿಯ ಎರಡೂ ಪಕ್ಕದಲ್ಲಿ ಉದ್ದಕ್ಕೂ ೨೧ ಸಾವಿರ ಹೆಕ್ಟೇರ್ ಭೂಮಿಯಲ್ಲಿ ಜೈವಿಕ ಕೃಷಿಯನ್ನು ರೂಢಿಗೆ ತರಬೇಕು ಎಂದು ಬಿಹಾರ ಸರಕಾರ ಯೋಜನೆ ರೂಪಿಸಿದೆ.

**ಬಿಕ್ಕಟ್ಟು** : ಆಹಾರದ ಅಭದ್ರತೆಯ ಹಳ್ಳಿಗಳು

## ಪರಿಹಾರ : ಸಮುದಾಯಗಳಿಂದ ಆಹಾರ ಮತ್ತು ಸುರಕ್ಷತೆ



ಕೋವಿಡ್-೧೯ ಮಹಾಮಾರಿಯ ಅವಧಿಯಲ್ಲಿ ಸಂಕಷ್ಟಕ್ಕೆ ಸಿಲುಕಿದ ದಿನಗೂಲಿಗಳ ಹಾಗೂ ಬಡರೈತರಿಗೆ ನೆರವು ನೀಡಲು ಕೆಡಿಯಾ ಸಮುದಾಯದ ಜನರು ಟೊಂಕ ಕಟ್ಟಿದರು. ಪಂಚಾಯತ್ ಸದಸ್ಯರನ್ನು, ಸ್ವಯಂಸೇವಾ ಸಂಘಟನೆಗಳನ್ನು ಮತ್ತು ಸ್ಥಳೀಯ ಮಾಧ್ಯಮಗಳನ್ನು ಸಂಪರ್ಕಿಸಿ ಸುತ್ತಮುತ್ತಲಿನ ಊರುಗಳಲ್ಲಿ ಸರಕಾರಿ ಪಡಿತರ ಸಿಗದೇ ಇದ್ದವರ ಪಟ್ಟಿಯನ್ನು ತಯಾರಿಸಿದರು. ಒಟ್ಟು ೪೨೬ ಕುಟುಂಬಗಳನ್ನು ಗುರುತಿಸಿ, ಅವಕ್ಕೆ ಅಗತ್ಯವಿದ್ದ ಒಣ ಪಡಿತರ ಚೀಲಗಳನ್ನು (ಅಂದರೆ ಸಾವಯವ ಅಕ್ಕಿ, ಗೋಧಿಹಿಟ್ಟು, ಬೇಳೆಕಾಳು, ಎಣ್ಣೆ ಮತ್ತು ಕಡಲೆ) ವಿತರಿಸಿದರು. ಮುಖವಾಡಗಳನ್ನು ತಯಾರಿಸಿ ಹಂಚಿದರು.

## ಪಾಠಗಳು

ಸ್ಥಳೀಯ ಸಂಪನ್ಮೂಲಗಳನ್ನೇ ಬಳಸಿಕೊಂಡು ವಿವಿಧ ಬಗೆಯ ಸಾವಯವ ಉತ್ಪನ್ನಗಳನ್ನು ಸಿದ್ಧಪಡಿಸಲು ಸಾಧ್ಯವಿದೆ. ಹೊರಗಿನ ನೆರವಿಗೆ ಕೈಚಾಚದೇ ಕೋವಿಡ್-೧೯ರಂಥ ಸಂಕಟದ ದಿನಗಳಲ್ಲಿ ಸ್ಥಳೀಯ ನಾಗರಿಕರು ತಾವೇ ಇತರರ ಕೈಹಿಡಿಯಲು ಸಮರ್ಥರಾಗುತ್ತಾರೆ. ಸರಕಾರಿ ಧೋರಣೆಗಳಲ್ಲಿ ಪರಿವರ್ತನೆಯಾದರೆ, ಅದೇಕಾಲಕ್ಕೆ ಸ್ವಯಂಸೇವಾ ಸಂಘಟನೆಗಳ ನೆರವು ಸಿಕ್ಕರೆ ಇಂಥ ಪರಿವರ್ತನೆ ಸಾಧ್ಯವೆಂದು ತೋರಿಸಬಹುದಾಗಿದೆ.

## ಸಂಪರ್ಕಕ್ಕೆ

ಇಷ್ತಿಯಾಕ್ ಅಹ್ಮದ್: ishteyaque.ahmed@greenpeace.org, 7632988788

ಚಿತ್ರ: ಕೆಡಿಯಾ ರೈತರು



ಕೆಡಿಯಾ ಗ್ರಾಮಸ್ಥರಿಂದ ಕೊವಿಡ್-೧೯ರ ಸಂದರ್ಭದಲ್ಲಿ ಆಹಾರಧಾನ್ಯ ವಿತರಣೆ

**ಬಿಕ್ಕಟ್ಟು :** ಆಹಾರದ ಅಭದ್ರತೆಯ ಹಳ್ಳಿಗಳು

**ಪರಿಹಾರ : ಸಮುದಾಯಗಳಿಂದ ಆಹಾರ ಮತ್ತು ಸುರಕ್ಷತೆ**



# ಆಹಾರ ಕೊರತೆಯಿರುವ ಗ್ರಾಮಗಳಲ್ಲಿ ಏನು ಮಾಡಬೇಕು?

- ಈಗಿರುವ ಆದ್ಯತೆ ಬದಲಾಗಬೇಕು. ಚಿಕ್ಕ ಹಿಡುವಳಿದಾರರಿಗೆ, ಅಂದರೆ ರೈತರು, ಪಶುಪಾಲಕರು, ಮೀನುಗಾರರು, ಅರಣ್ಯವಾಸಿಗಳು ಮತ್ತು ಗುಡಿಕೈಗಾರಿಕೆ ಕುಟುಂಬಗಳು ಇಂಥವರಿಗೆ ಆದ್ಯತೆ ಕೊಡಬೇಕು. (ಭಾರತದಲ್ಲಿ ಅತಿ ಹೆಚ್ಚು ಉತ್ಪಾದನೆ ಇಂಥ ಕಿರು ಸಾಧಕರಿಂದಲೇ ಆಗುತ್ತಿದೆ).
- ಅಂಥವರನ್ನು ಒಂದುಗೂಡಿಸಿ ಗ್ರಾಮಮಟ್ಟದಲ್ಲಿ ಅಥವಾ ಪಂಚಾಯತ್ ಮಟ್ಟದಲ್ಲಿ ಸಂಘ ಕಟ್ಟಬೇಕು. ಅದರಲ್ಲೂ ವಿಶೇಷವಾಗಿ ಕೆಳವರ್ಗದವರಿಗೆ ಆದ್ಯತೆ ಸಿಗಬೇಕು. ಅವರಿಗೆ ತಕ್ಕಮಟ್ಟಿಗೆ ಭೂಮಿ, ಗೋಮಾಳ, ಕೆರೆಯಂಥ ಉತ್ಪಾದಕ ಘಟಕಗಳು ಲಭ್ಯವಾಗುವಂತಿರಬೇಕು.
- ಆಹಾರೋತ್ಪನ್ನಕ್ಕೆ ಆದ್ಯತೆ ಕೊಟ್ಟು ವೈವಿಧ್ಯಮಯ, ಸಾವಯವ ಫಸಲು ತೆಗೆಯುವಂತೆ ಪ್ರೋತ್ಸಾಹಿಸಬೇಕು. ಅವು ಅಲ್ಲಿನ ವಾತಾವರಣಕ್ಕೆ ಹೊಂದುವಂತಿರಬೇಕು. ಸಮುದಾಯ ಮಟ್ಟದಲ್ಲಿ ಕಾಳುನಿಧಿಗಳನ್ನು ಆರಂಭಿಸಲು ನೆರವು ಸಿಗಬೇಕು. ಸ್ಥಳೀಯ ಬೀಜವೈವಿಧ್ಯ ಸಂರಕ್ಷಣೆ ಹಾಗೂ ತಳಿವೈವಿಧ್ಯ ರಕ್ಷಣೆಗೆ ನೆಲಮೂಲದ ಜ್ಞಾನವನ್ನೇ ರೂಢಿಗೆ ತರಬೇಕು.
- ಒಣ ಮತ್ತು ಮಳೆಯಾಶ್ರಿತ ಭೂಮಿಗೂ ಹದಮಟ್ಟದಲ್ಲಿ (ಗರಿಷ್ಠವಲ್ಲ) ನೀರು ಲಭಿಸುವಂತೆ ಸಮತೋಲನ ಸಾಧಿಸಬೇಕು. ಕೊಳವೆಬಾವಿಗಳ ಬಳಕೆಯನ್ನು ಮತ್ತು ಜಾಸ್ತಿ ನೀರನ್ನು ಬೇಡುವ ಬೆಳೆಯನ್ನು ಕಡಿಮೆ ಮಾಡಬೇಕು. ಮಳೆಕೊಯ್ಲನ್ನು ಪ್ರೋತ್ಸಾಹಿಸಿ, ಮರೆತು ಹೋದ ಜಲರಕ್ಷಣಾ ವಿಧಾನಗಳನ್ನು ಮತ್ತೆ ಬಳಕೆಗೆ ತರಬೇಕು.
- ಹಸಿರು ಕ್ರಾಂತಿಯ ಹೆಸರಿನಲ್ಲಿ ಸಿಗುತ್ತಿದ್ದ ರಸಗೊಬ್ಬರ, ಕೀಟನಾಶಕಗಳಂಥ ಸಹಾಯಧನವನ್ನು ಸಾವಯವ ಬೇಸಾಯಕ್ಕೆ ವರ್ಗಾಯಿಸಬೇಕು. ಪೇಟೆಯಿಂದ ತರುವ ಒಳಸುರಿಗಳ ಬದಲು ಊರಲ್ಲೇ ಸಿಗುವ ಗೊಬ್ಬರ ಮತ್ತು ಬೀಜಗಳನ್ನು ಬಳಸಿ ನಿಧಾನವಾಗಿ ರೈತರು ಸಾವಯವ ಕೃಷಿಗೆ ಬದಲಾಗುವಂತೆ ಮಾಡಬೇಕು. ಈಗಿನ ಸರಕಾರಿ ಸಹಾಯಧನದ ಅವಲಂಬನೆಯಿಂದ ಮುಕ್ತವಾಗಿ ಶ್ರಮಿಕರು ತಮ್ಮ ಕಾಲಮೇಲೆ ತಾವೇ ನಿಲ್ಲುವಂತೆ, ಸ್ವಾಭಿಮಾನವನ್ನು ಪ್ರೋತ್ಸಾಹಿಸಬೇಕು.
- ದೊಡ್ಡ ಜಮೀನ್ದಾರಿಕೆಗೆ, ಅದರಲ್ಲೂ ವಿಶೇಷವಾಗಿ ಕಾರ್ಪೊರೇಟ್ ಕಂಪನಿಗಳು ನಡೆಸುವ ಬೇಸಾಯಕ್ಕೆ ಹೆಚ್ಚಿನ ತೆರಿಗೆ ಮತ್ತಿತರ ವಿಧಾನಗಳ ಮೂಲಕ ನಿರುತ್ತೇಜನ ಸಿಗುವಂತಾಗಬೇಕು.
- ಅಂಗನವಾಡಿಗೆ, ಶಾಲಾ ಊಟಕ್ಕೆ ಹಾಗೂ ಪಡಿತರ ಅಂಗಡಿಗಳಿಗೆ ಆಯಾ ಊರಲ್ಲಿ ಬೆಳೆದ ದವಸಧಾನ್ಯ ಪೂರೈಕೆ ಆಗುವಂತೆ ನೋಡಿಕೊಳ್ಳಬೇಕು. ಆಸ್ಪತ್ರೆ, ಕಾಲೇಜ್ ಕ್ಯಾಂಟೀನ್, ಹಾಸ್ಟೆಲ್‌ಗಳಿಗೆ ಸ್ಥಳೀಯರೇ ಉತ್ಪಾದಿಸಿದ ಹಣ್ಣು ತರಕಾರಿ, ಮೊಟ್ಟೆ, ಮೀನು, ಡೇರಿ ಉತ್ಪನ್ನಗಳು ಸಿಗುವಂತಾಗಬೇಕು. ಅವುಗಳನ್ನು ಒದಗಿಸುವ ವ್ಯವಸ್ಥೆಯೂ ಸ್ಥಳೀಯ ಸಂಘಗಳ ಕೈಯಲ್ಲಿರಬೇಕು.
- ಆಹಾರ ಸ್ವಾವಲಂಬನೆಗೆ ಆದ್ಯತೆ ಸಿಗಬೇಕು. ಹೊಸದಾಗಿ ಹೊರಗಿನ ಯಾವುದೇ ವ್ಯಾಪಾರಿ ಒಪ್ಪಂದಗಳಿಗೆ ಸಹಿ ಹಾಕಬಾರದು; ಸಾಧ್ಯವಾದಷ್ಟೂ ಈಗಿರುವ ಒಪ್ಪಂದ/ನಿಬಂಧನೆಗಳಿಂದ ಹೊರಬರಲು ಯತ್ನಿಸಬೇಕು.

**ಬಿಕ್ಕಟ್ಟು:** ರೈತರಿಗೆ ಮಾರುಕಟ್ಟೆ ಪ್ರವೇಶದ ಕೊರತೆ ಮತ್ತು ಅಸಮರ್ಪಕ ಅಥವಾ ನಗರಗಳಲ್ಲಿ ಅನಾರೋಗ್ಯಕರ ಆಹಾರ ಲಭ್ಯತೆ

**ಪರಿಹಾರ:** ಗ್ರಾಹಕ-ರೈತ ನೇರ ಸಂಪರ್ಕಗಳು



ಚಿತ್ರ: ಮಾನಸ ಅರವಿಂದ್





# ಗುಡ್‌ಗಾಂವ್‌ನ ರೈತ ಸಂತೆ

ದಿಲ್ಲಿಯ ಸಮೀಪದ ಗುಡ್‌ಗಾಂವ್‌ನಲ್ಲಿ (ಇಂಗ್ಲಿಷ್‌ನಲ್ಲಿ Gurgaon. ಈಗ ಅದರ ಹೆಸರನ್ನು ಗುರುಗ್ರಾಮ ಎಂದು ಬದಲಿಸಲಾಗಿದೆ) ೨೦೧೪ರಿಂದಲೂ ಕೋವಿಡ್ ಲಾಕ್‌ಡೌನ್ ಆಗುವವರೆಗೂ ನಿರಂತರವಾಗಿ ಸಾವಯವ ಸಂತೆ ನಡೆಯುತ್ತಿತ್ತು. ಸುಮಾರು ೨೦ ಸಾವಯವ ಬೆಳೆಗಾರರು ಮತ್ತು ೫೦೦ಕ್ಕೂ ಹೆಚ್ಚು ಗ್ರಾಹಕ ಕುಟುಂಬಗಳ ಜಂಟಿ ಯತ್ನದಿಂದ ಆರಂಭವಾದ ಇದು 'ಗುಡ್‌ಗಾಂವ್ ಸಾವಯವ ರೈತ ಸಂತೆ' (ಉಔಈಒ) ಎಂದೇ ಪ್ರಸಿದ್ಧಿ ಪಡೆದಿತ್ತು. ಲಾಭದ ಆಸೆಯಿಲ್ಲದೆ, ಕೇವಲ ಸ್ವಯಂಪ್ರೇರಿತರ ಆಸಕ್ತಿಯಿಂದಾಗಿ ಪ್ರಾಮಾಣಿಕತೆಯ ಮತ್ತು ನೈತಿಕತೆ ಬಲದಿಂದ ಈ ಇಷ್ಟೂ ವರ್ಷಗಳಿಂದ ನಡೆಯುತ್ತ ಬಂದಿದೆ. ಲಾಕ್‌ಡೌನ್ ಅವಧಿಯಲ್ಲೂ ಸಂತೆ ನಿಲ್ಲಲಿಲ್ಲ. ಅದು ಈಗ ಆನ್‌ಲೈನ್ ಸಂತೆಯಾಯಿತು. ಗ್ರಾಹಕರ ಮನೆಮನೆಗೆ ತಾಜಾ ಗಡ್ಡೆತರಕಾರಿಗಳನ್ನು ಒದಗಿಸುವ ಕಾಯಕ ಮುಂದುವರೆಯಿತು.

ನಗರದ ಆಸುಪಾಸಿನ ಚಿಕ್ಕ ದೊಡ್ಡ ರೈತ ಯಾರೇ ಆದರೂ ಈ ಸಂಘಟನೆಯ ಧ್ಯೇಯೋದ್ದೇಶಗಳನ್ನು ಒಪ್ಪಿ ಸಂತೆಗೆ ತಮ್ಮ ಉತ್ಪನ್ನಗಳನ್ನು ಒದಗಿಸಬಹುದು. ಸಂತೆ ನಡೆಸುವಲ್ಲಿ ರೈತರೂ ಇದ್ದಾರೆ. ಸಾವಯವ ಮಳಿಗೆಗಳೂ ಇವೆ. ಬೆಲೆಯನ್ನು ರೈತರೇ ನಿರ್ಧರಿಸುತ್ತಾರೆ. ರೈತರ ಹೊಲಗಳಿಗೆ ಸಂಘಟನೆಯ ಸ್ವಯಂಸೇವಕರು ಹಾಗೂ ಉತ್ಸಾಹಿ ಗ್ರಾಹಕರೂ ಭೇಟಿ ಕೊಡಬಹುದು. ಅಲ್ಲಿ ಬೆಳೆದಿದ್ದೆಲ್ಲ ನಿಜಕ್ಕೂ ಸಾವಯವ ಹೌದೇ ಅಲ್ಲವೇ ಪರೀಕ್ಷಿಸಬಹುದು. ಸಾವಯವ ಸರ್ಟಿಫಿಕೇಶನ್ ಬಗ್ಗೆ ಸಂಘಟನೆಗೆ ವಿಶ್ವಾಸವಿಲ್ಲ. ಗಿರಾಕಿಗಳ ವಿಶ್ವಾಸ ಮತ್ತು ನಂಬಿಕೆಯೇ ಇಡೀ ವ್ಯವಸ್ಥೆಯ ಆಧಾರವಾಗಿದೆ. ಅಪರೂಪಕ್ಕೆ ಗ್ರಾಹಕರನ್ನು ವಂಚಿಸಲು ಯತ್ನಿಸಿ ಒಂದಿಬ್ಬರು ಸಿಕ್ಕಿಬಿದ್ದಿದ್ದೇನೊ ಹೌದು. ಅಂಥವರನ್ನು ಸಂಘಟನೆಯಿಂದ ಹೊರಕ್ಕೆ ಹಾಕಲಾಗಿದೆ. ಆದರೆ ಸಾವಯವ ಪದ್ಧತಿಯಲ್ಲೇ ಬೆಳೆ ತೆಗೆಯುವಲ್ಲಿ ಇರುವ ಅನುಕೂಲಗಳು ಎಷ್ಟಿವೆಯೆಂದರೆ ಇಂಥ ವಂಚನೆಯ ಪ್ರಸಂಗಗಳು ತೀರಾ ತೀರಾ ಅಪರೂಪ.

ಗುಡಗಾಂವ್ ಸಂತೆಯ ಸಂಸ್ಥಾಪಕರಲ್ಲೊಬ್ಬರಾದ ಮಾನಸ್ ಅರವಿಂದ್ 'ಫಾರ್ಮರ್ಸ್-ಮಾರ್ಕೆಟ್- ಇಂಡಿಯಾ ಅಟ್ ಗೂಗಲ್ ಗ್ರುಪ್ಸ್ ಡಾಟ್ ಕಾಂ' ಹೆಸರಿನ ಒಂದು ಆನ್ ಲೈನ್ ತಂಡವನ್ನು ರಚಿಸಿದ್ದಾರೆ. ಇದರಂಥದ್ದೇ

**ಬಿಕ್ಕಟ್ಟು:** ರೈತರಿಗೆ ಮಾರುಕಟ್ಟೆ ಪ್ರವೇಶದ ಕೊರತೆ ಮತ್ತು ಅಸಮರ್ಪಕ ಅಥವಾ ನಗರಗಳಲ್ಲಿ ಅನಾರೋಗ್ಯಕರ ಆಹಾರ ಲಭ್ಯತೆ

**ಪರಿಹಾರ:** ಗ್ರಾಹಕ-ರೈತ ನೇರ ಸಂಪರ್ಕಗಳು



ಚಟುವಟಿಕೆಗಳನ್ನು ನಡೆಸುತ್ತಿರುವ ಸಂಘಟನೆಗಳು ಬೇರೆಲ್ಲಾದರೂ ಇದ್ದರೆ ಅಥವಾ ತಾವೂ ಆರಂಭಿಸಬೇಕೆಂಬ ಉತ್ಸಾಹಿಗಳು ಇದ್ದರೆ ಅಂಥವರು ಬೇಕಿದ್ದರೆ ಈ ಗುಂಪಿಗೆ ಸೇರಿಕೊಳ್ಳಬಹುದು.

## ಪಾಠಗಳು

ಭಾರತದ ಎಲ್ಲ ಗ್ರಾಮೀಣ ಪ್ರದೇಶಗಳು ಒಂದಲ್ಲ ಒಂದು ಪಟ್ಟಣಕ್ಕೋ ನಗರಕ್ಕೋ ಅಥವಾ ಇನ್ನೊಂದು ಹಳ್ಳಿಗೋ ಸಂಪರ್ಕ ಇಟ್ಟುಕೊಂಡಿರುತ್ತವೆ. ಹಿಂದೆ ಇದ್ದ ಸಂಪ್ರದಾಯದಂತೆ ಮಧ್ಯವರ್ತಿಗಳ ಪ್ರವೇಶವಿಲ್ಲದೆ ರೈತರು, ಗೌಳಿಗಳು, ಮೀನುಗಾರರು, ಅರಣ್ಯವಾಸಿಗಳು ಮತ್ತು ಕುಶಲಕರ್ಮಿಗಳು ಒಂದಾಗಿ ಸಂತೆಯನ್ನು ಸಂಘಟಿಸಿ ಗ್ರಾಹಕರಿಗೆ ನೇರವಾಗಿ ತಂತಮ್ಮ ಉತ್ಪನ್ನಗಳನ್ನು ಒದಗಿಸಬಹುದು. ಸ್ಥಳೀಯವಾಗಿ ಚಿಕ್ಕಪುಟ್ಟ ವ್ಯಾಪಾರಿಗಳು ಮತ್ತು ಸಂಗ್ರಾಹಕರು ಅಂಗಡಿಗಳನ್ನು ತೆರೆಯಬಹುದು. ಇದರಿಂದ ತಾಜಾ ಉತ್ಪನ್ನಗಳು ಗ್ರಾಹಕರಿಗೆ ಲಭಿಸುತ್ತವೆ ಅಷ್ಟೇ ಅಲ್ಲ, ಕೋವಿಡ್ ಸಂದರ್ಭದಲ್ಲಿ ನಾವೆಲ್ಲ ಮನಗಂಡಂತೆ, ದೂರದ ಪ್ರಯಾಣದ ಸಂಕಷ್ಟಗಳಿಗೆ ಪರಿಹಾರ ಸಿಗುತ್ತದೆ. ಇಷ್ಟಕ್ಕೂ ದೊಡ್ಡ ಊರಿಗೆ ಪಯಣಿಸುವುದೆಂದರೆ ದೊಡ್ಡ ಕಂಪನಿಗಳ ಹಾಗೂ ಮಧ್ಯವರ್ತಿಗಳ ಹೊಟ್ಟೆ ಹೊರೆಯಲು ಹೋಗುವುದೆಂದೇ ಅರ್ಥ ತಾನೆ? ಇಲ್ಲಿ ಎದುರಾಗುವ ಒಂದು ಸವಾಲು ಏನೆಂದರೆ, ಇಂಥ ವ್ಯವಸ್ಥೆಯಲ್ಲಿ ಸಾವಯವ ಉತ್ಪನ್ನಗಳು ಲಭಿಸುವಂತೆ ಮತ್ತು ಅದು ಕಡು ಬಡವರಿಗೂ ಎಟಕುವಂತೆ ಮಾಡುವುದು ಹೇಗೆ? ಈಗಿರುವ ಸಹಾಯಧನದ ವ್ಯವಸ್ಥೆಯನ್ನು ಬದಲಿಸುವಂತೆ ಸರಕಾರಗಳು ಮತ್ತು ಸರಕಾರೇತರ ಸಂಸ್ಥೆಗಳು ಪ್ರಯತ್ನಿಸಿದರೆ ಕೆಲಮಟ್ಟಿಗೆ ಸಹಕಾರಿಯಾಗುತ್ತದೆ.

## ಸಂಪರ್ಕಕ್ಕೆ

ಮಾನಸ್ ಅರವಿಂದ್ manasarvind@gmail.com
COVID- ಸಮಯದ ಸಂಭಾಷಣೆಯನ್ನು ಸಹ ನೋಡಿ:
https://vscoronatimes.blogspot.com/2020/04/vikalp-varta-1-farmers-markets.html

ಚಿತ್ರ: ಮಾನಸ ಅರವಿಂದ್





ಗುಡ್‌ಗಾಂವ್ ನಗರದಲ್ಲಿ ಜನನಿಬಿಡ ಸಾವಯವ ಸಂತೆ: ಗ್ರಾಹಕರೂ ಕೊಯ್ಲು ಮಾಡಬಹುದಾದ ತಾಜಾ ಫಲಗಳು

**ಬಿಕ್ಕಟ್ಟು:** ರೈತರಿಗೆ ಮಾರುಕಟ್ಟೆ ಪ್ರವೇಶದ ಕೊರತೆ ಮತ್ತು ಅಸಮರ್ಪಕ ಅಥವಾ ನಗರಗಳಲ್ಲಿ ಅನಾರೋಗ್ಯಕರ ಆಹಾರ ಲಭ್ಯತೆ

**ಪರಿಹಾರ:** ಗ್ರಾಹಕ-ರೈತ ನೇರ ಸಂಪರ್ಕಗಳು



(ಚಿತ್ರ: ದಯಾನಂದ್ ನಿಕಮ್)



ಸಾತಾರಾ ಜಿಲ್ಲೆಯ ರೈತರು ತಮ್ಮ ಹೊಲದ ಉತ್ಪನ್ನಗಳ ಸಾಗಾಟದಲ್ಲಿ

# ಕೋವಿಡ್ ಕಾಲದಲ್ಲಿ ಸಾತಾರಾ 'ನೇರ ಮನೆಗೆ' ವಿನಿಮಯ

ಹಿಂಗಾರಿನ ಕೊಯ್ಲಿನ ಸಂದರ್ಭದಲ್ಲೇ ಕೊರೊನಾ ಸಾಂಕ್ರಾಮಿಕ ಹಬ್ಬಿದ್ದರಿಂದ ಮಹಾರಾಷ್ಟ್ರದ ಸಾತಾರ ಜಿಲ್ಲೆಯ ರೈತರು ಅನೇಕ ಸವಾಲುಗಳನ್ನು ಒಟ್ಟಿಗೆ ಎದುರಿಸಬೇಕಾಯಿತು: ಕೊಯ್ಲಿಗೆ ಬರಬೇಕಿದ್ದ ಕೂಲಿ ಕಾರ್ಮಿಕರು ಎಲ್ಲೂ ಕಾಣುತ್ತಿಲ್ಲ. ಹೇಗೋ ಕೊಯ್ಲು ಮುಗಿಸಿದರೂ ಅದನ್ನು ಪೇಟೆಗೆ ಸಾಗಿಸಲು ಸಾಧ್ಯವಾಗುತ್ತಿಲ್ಲ. ಈ ನಡುವೆ ಮಧ್ಯವರ್ತಿಗಳೂ ಖರೀದಿಗೆ ಬರುತ್ತಿಲ್ಲ, ಬಂದರೂ ತೀರ ಕಡಿಮೆ ಬೆಲೆಗೆ ಕೃಷಿ ಉತ್ಪನ್ನಗಳನ್ನು ಕೇಳುತ್ತಿದ್ದಾರೆ. ಕೂಲಿಕಾರ್ಮಿಕರ ಹಠಾತ್ ಹಿಮ್ಮೊಗ ವಲಸೆ ರಾಜ್ಯದೆಲ್ಲೆಡೆ ಕೃಷಿ ವ್ಯವಸ್ಥೆಯನ್ನೇ ಬುಡಮೇಲು ಮಾಡಿತು. ಕೇಂದ್ರ ಸರಕಾರದಿಂದ ಸಾಕಷ್ಟು ನೆರವೂ ಸಿಗಲಿಲ್ಲ.

ಸಾತಾರಾ ಪಟ್ಟಣದ ಆಡಳಿತ ಚುರುಕಾಯಿತು. ಬದಲೀ ಸ್ಥಳೀಯ ವ್ಯವಸ್ಥೆಯನ್ನು ಹೇಗಾದರೂ ರೂಪಿಸಬೇಕೆಂದು ರೈತರ, ಮಧ್ಯವರ್ತಿಗಳ, ಸ್ವಯಂಸೇವಾ ಸಂಸ್ಥೆಗಳ ಮತ್ತು ಸಾಮಾಜಿಕ ಚಿಂತಕರ ಸಭೆ ಸೇರಿತು. ಸಾತಾರಾ ಪುರಸಭೆಯ ಉಪಮುಖ್ಯಾಧಿಕಾರಿ ಸಂಚಿತ್ ಧುಮಾಳ್ ಮತ್ತು ಅನುಭವಿ ಸಾಮಾಜಿಕ ಕಾರ್ಯಕರ್ತ ಅವಿನಾಶ್ ಪೋಳ್ ಸೇರಿ ಒಂದು ಕಾರ್ಯಸೂಚಿಯನ್ನು ಸಿದ್ಧಪಡಿಸಿದರು. ಹಣ್ಣು-ತರಕಾರಿ, ಕಿರಾಣಿ, ಹೈನು ಮುಂತಾದವನ್ನು ಹಳ್ಳಿಯಿಂದ ಸಾಗಿಸಿ ತಂದು ಮನೆಮನೆಗಳಿಗೆ ನೇರವಾಗಿ ತಲುಪಿಸುವ ವ್ಯವಸ್ಥೆಯೊಂದು ಪ್ರಾಯೋಗಿಕವಾಗಿ ಆರಂಭವಾಯಿತು. ದೈಹಿಕ ಅಂತರವನ್ನು ಕಾಯ್ದುಕೊಂಡೇ ಕಟಾವು ಮತ್ತು ಸಾಗಾಟ ಕ್ರಿಯೆ ನಡೆಯಿತು. ಸುಮಾರು ೩೮ ರೈತರು ಸಾತಾರಾ ಪುರಸಭೆಯ ನೆರವಿನಿಂದ ಕೃಷಿ ಉತ್ಪನ್ನಗಳನ್ನು ಅವುಗಳ ತಾಜಾತನ ಉಳಿದಿರುವಾಗಲೇ ತಾವೇ ತಂದು, ನಿಗದಿತ ಗಲ್ಲಿಗಳಿಗೆ ಪೂರೈಸುವಂತೆ ವಾಹನಗಳ ವ್ಯವಸ್ಥೆ ಮಾಡಲಾಯಿತು. ರೈತರಿಗಾಗಿ ಧ್ವನಿವರ್ಧಕಗಳ ವ್ಯವಸ್ಥೆಯನ್ನೂ ಮಾಡಲಾಯಿತು. ಸಾಮಾನ್ಯ ದಿನಗಳಲ್ಲಿ ಮಧ್ಯವರ್ತಿಗಳ ಮೇಲೆ ಅವಲಂಬಿತವಾಗಿದ್ದ ರೈತರ ವರಮಾನ ಈಗ ಹೆಚ್ಚಾಯಿತು.

**ಬಿಕ್ಕಟ್ಟು:** ರೈತರಿಗೆ ಮಾರುಕಟ್ಟೆ ಪ್ರವೇಶದ ಕೊರತೆ ಮತ್ತು ಅಸಮರ್ಪಕ ಅಥವಾ ನಗರಗಳಲ್ಲಿ ಅನಾರೋಗ್ಯಕರ ಆಹಾರ ಲಭ್ಯತೆ

**ಪರಿಹಾರ:** ಗ್ರಾಹಕ-ರೈತ ನೇರ ಸಂಪರ್ಕಗಳು



ಸರಕು ಸಾಗಣೆಯ ವ್ಯಾನ್‌ಗಳನ್ನು ಓಡಿಸುವ ಹಕ್ಕುಗಳನ್ನು ರೈತರಿಗೇ ನೀಡಲಾಯಿತು. ರೈತರು ಒಗ್ಗಟ್ಟಾಗಿ ನಗರದ ವಿವಿಧ ಬಡಾವಣೆಗಳಿಗೆ ಕೃಷಿ ಉತ್ಪನ್ನಗಳನ್ನು ತಲುಪಿಸುವ ರಣನೀತಿಯನ್ನು ರೂಪಿಸಿದರು. ಏಪ್ರಿಲ್ ೨೦೨೦ರ ವೇಳೆಗೆ ಸುಮಾರು ಸಾತಾರಾದ ೨೫೦ ಮನೆಗಳಿಗೆ ನೇರವಾಗಿ ಹಳ್ಳಿಗಳಿಂದ ಕಾಳು, ತರಕಾರಿಗಳು ಬರತೊಡಗಿದವು.

ಮಂಡಿ (ಹಳ್ಳಿಯ ಉತ್ಪನ್ನಗಳ ಖರೀದಿ ಅಂಗಡಿ)ಗಳಲ್ಲಿ, ಅಲ್ಲಿನ ನೂಕು ನುಗ್ಗಲಿನಲ್ಲಿ ದೈಹಿಕ ಅಂತರವನ್ನೂ ಮರೆತು ಕೊಸರಾಡಿ ಅಕ್ಕಿಬೇಳೆ ತರಕಾರಿಯನ್ನು ಮಾರುವುದಕ್ಕಿಂತ ಇದು ಎಷ್ಟೋ ಪಾಲು ಉತ್ತಮವಂತೂ ಹೌದು. ಮಧ್ಯವರ್ತಿಗಳನ್ನು ದೂರವಿಟ್ಟಿದ್ದಕ್ಕೇ ರೈತರಿಗೆ ಆದಾಯ ಹೆಚ್ಚುತ್ತದೆ. ಗ್ರಾಹಕರಿಗೂ ತಮ್ಮ ಮನೆಬಾಗಿಲಲ್ಲೇ ತಾಜಾ ಉತ್ಪನ್ನಗಳು ತುಸು ಕಡಿಮೆ ಬೆಲೆಗೇ ಸಿಗುತ್ತಿರುವದೂ ಸಂತಸ ತಂದಿತ್ತು. ನಿಗದಿತ ಸಮಯಕ್ಕೆ ಖಾತ್ರಿಯಾಗಿ ಈ ಉತ್ಪನ್ನಗಳು ಸಿಗುತ್ತವೆಂದರೆ ಅನಗತ್ಯವಾಗಿ ಜಾಸ್ತಿ ಸಾಮಗ್ರಿಗಳನ್ನು ಮನೆಯಲ್ಲಿ ತುಂಬಿಸಿಕೊಳ್ಳುವ ತಾಪತ್ರಯವೂ ತಪ್ಪಿತು.

## ಪಾಠಗಳು

ರೈತರಿಂದ ಗ್ರಾಹಕರಿಗೆ ನೇರವಾಗಿ ಸ್ಥಳೀಯ ಉತ್ಪನ್ನಗಳು ತಾಜಾ ಸ್ಥಿತಿಯಲ್ಲಿ ಸಿಗುತ್ತದೆಂದರೆ ಅದು ಕೃಷಿಕರಿಗೂ ಗ್ರಾಹಕರಿಗೂ ಅನುಕೂಲವೇ ಆಗುತ್ತದೆ. ಪರಿಸರಕ್ಕೂ ಅದು ಒಳ್ಳೆಯದೇ ಆಗುತ್ತದೆ. ಸ್ಥಳೀಯ ಸಮುದಾಯದ ಸಬಲೀಕರಣಕ್ಕೂ ಕಾರಣವಾಗಿ ಹಳ್ಳಿ ಮತ್ತು ನಗರಗಳ ನಡುವೆ ಒಂದು ಸುಮಧುರ ಸಂಬಂಧವನ್ನು ಸೃಷ್ಟಿಸುತ್ತದೆ. ಒಟ್ಟಾರೆಯಾಗಿ ಕೋವಿಡ್‌ನಂಥ ಸಂಕಟವನ್ನು ನಿಭಾಯಿಸುವ ಸಾಮರ್ಥ್ಯ ಸಮುದಾಯಕ್ಕೆ ಬರುತ್ತದೆ.

ಈಗಿನ ಸವಾಲೇನೆಂದರೆ ಕೋವಿಡ್ ಸಂಕಟಸಮಯ ಕಳೆದ ನಂತರವೂ ಈ ಮಾದರಿ ಹೀಗೆಯೇ ಉಳಿದೀತೆ? ಎರಡನೆಯ ಸವಾಲೇನೆಂದರೆ, ಈಗಿನಕ್ಕಿಂತ ಸುಧಾರಿತ ಸಾವಯವ, ಆರೋಗ್ಯಪೂರ್ಣ ಕೃಷಿವ್ಯವಸ್ಥೆಯನ್ನು ಪ್ರೋತ್ಸಾಹಿಸಲು ಸಾಧ್ಯವಾದೀತೆ?

## ಸಂಪರ್ಕಕ್ಕೆ

ಸಂಚಿತ್ ಧುಮಾಳ್- ಡೆಪ್ಯುಟಿ ಚೀಫ್ ಆಫೀಸರ್ ಮತ್ತು ಆರೋಗ್ಯ ಇಲಾಖೆಯ ಮುಖ್ಯಸ್ಥರು
(ಸಾತಾರಾ ಜಿಲ್ಲಾಧಿಕಾರಿಯ ಕಚೇರಿ: 02162232175)

**ಬಿಕ್ಕಟ್ಟು:** ರೈತರಿಗೆ ಮಾರುಕಟ್ಟೆ ಪ್ರವೇಶದ ಕೊರತೆ ಮತ್ತು ಅಸಮರ್ಪಕ ಅಥವಾ ನಗರಗಳಲ್ಲಿ ಅನಾರೋಗ್ಯಕರ ಆಹಾರ ಲಭ್ಯತೆ

**ಪರಿಹಾರ:** ಗ್ರಾಹಕ-ರೈತ ನೇರ ಸಂಪರ್ಕಗಳು



ಚಿತ್ರ ಕೃಪೆ: ನವದರ್ಶನಂ




ನವದರ್ಶನಂ ಸ್ವಸಹಾಯ ಗುಂಪಿನ ಚಟುವಟಿಕೆ (ಬಲಕ್ಕೆ) ನವದರ್ಶನಂ ಫುಡ್ ಕೋಅಪರೇಟಿವ್ ಸದಸ್ಯರು

# ನವದರ್ಶನಂ ಸಮುದಾಯ ಆಧರಿತ ಕೃಷಿ

ಬೆಂಗಳೂರಿನಿಂದ ೫೦ ಕಿಲೊಮೀಟರ್ ದೂರದಲ್ಲಿ ತಮಿಳುನಾಡಿನ ರಕ್ಷಿತಾರಣ್ಯದ ಪಕ್ಕದಲ್ಲಿ ನವದರ್ಶನಂ ಹೆಸರಿನ ಪುಟ್ಟ ಸಮುದಾಯವೊಂದು ೧೯೯೦ರಲ್ಲಿ ಸ್ಥಾಪಿತವಾಯಿತು. ಆಧುನಿಕ ಬದುಕಿನ ವಿಧಾನ ಮತ್ತು ಚಿಂತನೆಗಳಿಗಿಂತ ಭಿನ್ನವಾದ ಬದಲೀ ಜೀವನಪದ್ಧತಿಯನ್ನು ಶೋಧಿಸುವತ್ತ ಅದು ತೊಡಗಿಕೊಂಡಿತ್ತು. ಪರಿಸರ ಸಮತೋಲವನ್ನೂ ಆಂತರಿಕ ಶಾಂತಿಯನ್ನೂ ಸಾಧಿಸಬಲ್ಲ ಮಾರ್ಗವೊಂದನ್ನು ಕ್ರಮೇಣ ರೂಪಿಸುತ್ತಿತ್ತು. ಅಲ್ಲಿನ ನಿವಾಸಿಗಳು ಬಂಜರು ಭೂಮಿಯ ಸಂವರ್ಧನೆ ಮತ್ತು ಸಹಜ ನಿಸರ್ಗದ ನಿರ್ವಹಣೆನ್ನು ಮಾಡುತ್ತಲೇ ಬದಲೀ ಶಕ್ತಿಮೂಲದ ಸಂಶೋಧನೆ, ಸುಸ್ಥಿರ ಸಾವಯವ ಕೃಷಿ, ಮಳೆಕೊಯ್ಲು, ಆರೋಗ್ಯ ಮತ್ತು ಉಪಶಮನ ವಿಧಾನಗಳಿಗೆ ಸಂಬಂಧಿಸಿದ ಪ್ರಯೋಗಗಳನ್ನು ನಡೆಸುತ್ತ ಬಂದಿದ್ದರು. ಆರೋಗ್ಯಕ್ಕೆ ಪೂರಕವಾದ ಪಾರಂಪರಿಕ ಆಹಾರ ಸಂಸ್ಕೃತಿಯನ್ನು ಮತ್ತೆ ಜನಪ್ರಿಯಗೊಳಿಸುವ ನಿಟ್ಟಿನಲ್ಲೂ ಅವರು ಕ್ರಿಯಾಶೀಲರಾಗಿದ್ದರು.

ಪರಿಪೂರ್ಣ ಸಾವಯವ ಆಹಾರಪದಾರ್ಥಗಳನ್ನು ಉತ್ಪಾದಿಸಿ ಸಮೀಪದ ಬೆಂಗಳೂರು ಮತ್ತಿತರ ನಗರಗಳಲ್ಲಿ ಜನಪ್ರಿಯಗೊಳಿಸುವಲ್ಲಿ ಸಕ್ರಿಯವಾಗುವಂತೆ ಸ್ಥಳೀಯ ಗ್ರಾಮವಾಸಿಗಳ ಸ್ವಸಹಾಯ ಸಂಘಕ್ಕೆ ಸೂಕ್ತ ನೆರವು ಮತ್ತು ಮಾರ್ಗದರ್ಶನ ನೀಡುತ್ತ ನವದರ್ಶನಂ ಈ ವ್ಯವಸ್ಥೆಯನ್ನು ನಿರಂತರವಾಗಿಸುವಲ್ಲಿ ಸಕ್ರಿಯವಾಗಿದೆ. ೨೦೧೭ರಲ್ಲಿ ಸ್ವಸಹಾಯ ಸಂಘದವರು ಸಮುದಾಯ ಆಧರಿತ ಕೃಷಿ (ಕಮ್ಯೂನಿಟಿ ಸಪೋರ್ಟೆಡ್ ಅಗ್ರಿಕಲ್ಚರ್-ಸಿಎಸ್‌ಎ) ಎಂಬ ಸಂಘಟನೆಯನ್ನು ಆರಂಭಿಸಿದ್ದಾರೆ. ನಗರದ ಚಂದಾದಾರರ ಅಗತ್ಯಕ್ಕೆ ತಕ್ಕಂತೆ ಸಾವಯವ ಉತ್ಪನ್ನಗಳನ್ನು ಬೆಳೆಯಬಲ್ಲ ಕೃಷಿಕರನ್ನು ಗುರುತಿಸಿ ನೋಂದಣಿ ಮಾಡಿದೆ. ವಾರಕ್ಕೆ ಒಂದು ಪೆಟ್ಟಿಗೆಭರ್ತಿ ಸೊಪ್ಪು, ತರಕಾರಿ, ಗಡ್ಡೆಗೆಣಸು, ಹಣ್ಣುಹಂಪಲು ಮತ್ತು ಕಿರಾಣಿ ಸಾಮಗ್ರಿಗಳನ್ನು ಪರಿಸರಪೂರಕ ಪ್ಯಾಕಿಂಗ್ ಮಾಡಿ ಈ ಕೃಷಿಕರು ಪ್ರತಿ ಚಂದಾದಾರಿಗೆ ಒದಗಿಸುತ್ತಾರೆ. ಹೀಗೆ ಕಾಯಂ ಗ್ರಾಹಕರಿಂದ ಬರುವ ಹಣವೆಲ್ಲವೂ ಗ್ರಾಮೀಣ ಕೃಷಿಕರಿಗೆ ನೇರವಾಗಿ ತಲುಪುತ್ತವೆ. ಈ ವ್ಯವಸ್ಥೆಯನ್ನು ಒಪ್ಪಿಕೊಂಡ ಕೃಷಿಕರು ನಿಶ್ಚಿಂತರಾಗಿದ್ದಾರೆ.

**ಬಿಕ್ಕಟ್ಟು:** ರೈತರಿಗೆ ಮಾರುಕಟ್ಟೆ ಪ್ರವೇಶದ ಕೊರತೆ ಮತ್ತು ಅಸಮರ್ಪಕ ಅಥವಾ ನಗರಗಳಲ್ಲಿ ಅನಾರೋಗ್ಯಕರ ಆಹಾರ ಲಭ್ಯತೆ

**ಪರಿಹಾರ:** ಗ್ರಾಹಕ-ರೈತ ನೇರ ಸಂಪರ್ಕಗಳು



ಏಕೆಂದರೆ ಮಾಮೂಲಿನಂತೆ ಬೆಳೆ ಬೆಳೆದಿದ್ದರೆ ಸಿಗುತ್ತಿದ್ದ ವರಮಾನಕ್ಕಿಂತ, ಅಷ್ಟೇ ಜಮೀನಿನಲ್ಲಿ ಈಗ ಹತ್ತು ಪಟ್ಟು, ಇಪ್ಪತ್ತು ಪಟ್ಟು ಹೆಚ್ಚು ವರಮಾನವನ್ನು ಅವರು ನಗರದ ಚಂದಾದಾರರಿಂದ ಪಡೆಯುತ್ತಿದ್ದಾರೆ.

ಸಿಎಸ್‌ಎಗೆ ಕೋವಿಡ್ ಮಹಾಮಾರಿ ಬೇರೊಂದು ರೀತಿಯಲ್ಲಿ ತಲೆನೋವನ್ನು ತರಬಹುದಿತ್ತು. ನವದರ್ಶನಂ ತಮಿಳುನಾಡಿನಲ್ಲಿದೆ; ಗ್ರಾಹಕರು ಕರ್ನಾಟಕದ ರಾಜಧಾನಿಯಲ್ಲಿದ್ದಾರೆ. ಲಾಕ್‌ಡೌನ್ ನಿಬಂಧನೆಗಳ ಪ್ರಕಾರ ಎರಡು ರಾಜ್ಯಗಳ ನಡುವೆ ವಾಣಿಜ್ಯ ಸಂಬಂಧಿ ಸಂಚಾರಕ್ಕೆ ನಿಷೇಧವಿತ್ತು. ಎರಡೂ ರಾಜ್ಯಗಳಿಂದ ಅನುಮತಿ ಪತ್ರವನ್ನು ಪಡೆಯುವುದು ಸುಲಭವೇನಲ್ಲ. ಅಂಥ ಅಡೆತಡೆ ಬಂದಿದ್ದಿದ್ದರೆ ಕೃಷಿಕರ ಫಸಲನ್ನು ನಗರಕ್ಕೆ ತಲುಪಿಸುವುದು ಅಸಂಭವವಾಗುತ್ತಿತ್ತು. ಬೆಳೆದಿದ್ದೆಲ್ಲ ಹೊಲದಲ್ಲೇ ಉಳಿಯುವಂತಾಗಬಹುದಿತ್ತು. ಆದರೆ ಇದುವರೆಗೆ ಸಿಎಸ್‌ಎ ಅಂಥ ಯಾವುದೇ ಸಮಸ್ಯೆ ಇಲ್ಲದೆ ಬೆಂಗಳೂರಿನ ಗ್ರಾಹಕರಿಗೆ ತನ್ನ ಉತ್ಪನ್ನಗಳನ್ನು ಪೂರೈಸುತ್ತಿದೆ. ಇತ್ತ ಕೆಂಪು ಪ್ರದೇಶದಲ್ಲಿರುವ ಬೆಂಗಳೂರಿನ ಗ್ರಾಹಕರೂ ಖುಷಿಯಲ್ಲಿದ್ದಾರೆ. ಏಕೆಂದರೆ ಅವರು ಅಂಗಡಿಗಳಿಗೆ ಹೋಗುವಂತಿಲ್ಲವಾದರೂ ನಿಯಮಿತ ರೂಪದಲ್ಲಿ ತಾಜಾ ಆಹಾರ ಸಾಮಗ್ರಿ ಅವರವರ ನಿಗದಿತ ಇಳಿದಾಣಗಳಿಗೆ ಪೂರೈಕೆಯಾಗುತ್ತಿದೆ. ಕೊರೊನಾ ಸೋಂಕು ತಗಲುವ ಭಯ ಅಥವಾ ದೈಹಿಕ ಅಂತರವನ್ನು ಕಾಯ್ದುಕೊಳ್ಳಬೇಕಾದ ಕಿರಿಕಿರಿಗಳೂ ಇಲ್ಲದ ವಿಶಿಷ್ಟ ವ್ಯವಸ್ಥೆ ಅದು.

## ಪಾಠಗಳು

ಹಳ್ಳಿ-ಪಟ್ಟಣಗಳ ಬಾಂಧವ್ಯ ಸೇತುವಿನಲ್ಲಿ ಸಾವಯವ ಉತ್ಪಾದನೆ, ಸ್ವಸಹಾಯ ಗುಂಪಿನ ಸಬಲೀಕರಣ ಇವೆರಡರ ಆಚೆಗೆ ಇನ್ನೂ ಒಂದು ಪಾಠ ಇಲ್ಲಿ ನಮಗೆ ಸಿಕ್ಕಿದೆ. ಗ್ರಾಮ-ನಗರಗಳ ಸೌಹಾರ್ದ ಸಂಕ ಗಟ್ಟಿ ಇದ್ದರೆ ಕೋವಿಡ್ ಸಂಬಂಧಿತ ಅಡೆತಡೆಗಳೂ ತಂತಾನೇ ನಿವಾರಣೆಯಾಗುತ್ತವೆ.

## ಸಂಪರ್ಕಕ್ಕೆ

ಗೋಪಿ ಶಂಕರಸುಬ್ರಮಣಿ navadarshanam@gmail.com

ಚಿತ್ರ ಕೃಪೆ: ನವದರ್ಶನಂ



ನವದರ್ಶನಂ ಆಹಾರ ಸಹಕಾರ ಸಂಘದ (ಫುಡ್ ಕೋಆಪ್) ಸದಸ್ಯರು

**ಬಿಕ್ಕಟ್ಟು:** ರೈತರಿಗೆ ಮಾರುಕಟ್ಟೆ ಪ್ರವೇಶದ ಕೊರತೆ ಮತ್ತು ಅಸಮರ್ಪಕ ಅಥವಾ ನಗರಗಳಲ್ಲಿ ಅನಾರೋಗ್ಯಕರ ಆಹಾರ ಲಭ್ಯತೆ

**ಪರಿಹಾರ:** ಗ್ರಾಹಕ-ರೈತ ನೇರ ಸಂಪರ್ಕಗಳು



# ಕೃಷಿಕರಿಗೆ ಮಾರುವ ಅವಕಾಶ ಇಲ್ಲವಾದಾಗ ಅಥವಾ ನಗರವಾಸಿಗಳಿಗೆ ಆಹಾರದ ಅಭಾವವಿದ್ದಾಗ ಏನು ಮಾಡಬೇಕು? ಶಿಫಾರಸುಗಳು

- ಉತ್ಪಾದಕರು ತಮ್ಮದೇ ಮಾರುಕಟ್ಟೆಯನ್ನು ನಿರ್ಮಿಸಿಕೊಳ್ಳಬೇಕು. ರೈತರ ಮತ್ತು ಗ್ರಾಹಕರ ಅನುಕೂಲಕ್ಕೆ ತಕ್ಕಂತೆ ಅದು ಎರಡು ಹಳ್ಳಿಗಳ ನಡುವೆ ಅಥವಾ ಹಳ್ಳಿ ಮತ್ತು ಪಟ್ಟಣಗಳ ಇದ್ದರೆ ಒಳ್ಳೆಯದು; ಅದಕ್ಕೆ ಬೇಕಿದ್ದ ಅನುಕೂಲಗಳು ಲಭ್ಯವಾಗಬೇಕು.

- ಚಿಕ್ಕ ಹಿಡುವಳಿದಾರರ ಅಥವಾ ಕುಶಲಕರ್ಮಿಗಳೂ ಅಲ್ಲಿ ಅಂಗಡಿ ಹೂಡಲು ಆದ್ಯತೆ ಸಿಗಬೇಕು. ಅವರಿಗೆ ವಿಶೇಷ ರಿಯಾಯ್ತಿ ಇರಬೇಕು. ದೊಡ್ಡವರೇ ಅಲ್ಲಿ ಪ್ರಾಬಲ್ಯವನ್ನು ಮೆರೆಯುವಂಥ ಪರಿಸ್ಥಿತಿ ಇರಬಾರದು.

- ಇಂಥ ಮಾರುಕಟ್ಟೆಗೆ ಕಂಪನಿಗಳು ಬಾರದಂತೆ ನೋಡಿಕೊಳ್ಳಬೇಕು.

- ಸಂತೆಗೆ ಬಂದ ಸರಕುಗಳ ಬೆಲೆ ನಿಗದಿ ಸಾಧ್ಯವಾದಷ್ಟೂ ಪಾರದರ್ಶಕ ಇರಬೇಕು. ಉತ್ಪಾದನೆಗೆ ತಗುಲಿದ ವೆಚ್ಚ ಎಷ್ಟು ಎಂಬುದು ಗೊತ್ತಿದ್ದರೆ ಕೊಡುಕೊಳ್ಳುವ ಇಬ್ಬರೂ ಸೇರಿ ಸಮರ್ಪಕ ಬೆಲೆಯನ್ನು ನಿರ್ಧರಿಸಬಹುದು.

- ಬಡ ಕೃಷಿಕರೂ ಸಾವಯವ ಉತ್ಪಾದನೆಗೆ ತೊಡಗುವಂತೆ ಸಬ್ಸಿಡಿ ಸಿಗುವಂತಾಗಬೇಕು. ಗ್ರಾಹಕರು ನೈತಿಕ ಹೂಡಿಕೆದಾರರೂ ಆಗಿದ್ದರೆ ಬಡ ಉತ್ಪಾದಕರಿಗೆ ಕೃಷಿಸಲಕರಣೆಗಳ ಅಥವಾ ಒಳಸುರಿಗಳ, ಅಥವಾ ಸಾರಿಗೆಯ ನೆರವು ನೀಡಬಹುದು. ಇಲ್ಲವೆ ಅಂಥವರ ಉತ್ಪನ್ನಗಳಿಗೆ ಪಡಿತರ ಮಳಿಗೆಗಳಲ್ಲಿ ತುಸು ಜಾಸ್ತಿ ಹಣ ಸಿಗುವಂತೆ ಅನುಕೂಲ ಮಾಡಿಕೊಡಬಹುದು.

- ಗುಡಿ ಕೈಗಾರಿಕೆ ಮತ್ತು ಕರಕುಶಲ ವಸ್ತುಗಳಿಗೆ ಜಿಎಸ್‌ಟಿ ಅಥವಾ ಇನ್ನಿತರ ಭಾರ ಬೀಳದಂತೆ ನೋಡಿಕೊಂಡರೆ ಉತ್ಪಾದನಾ ಸ್ಪರ್ಧೆಗೆ ಸಮತಟ್ಟಾದ ನೆಲ ಸಿಕ್ಕಂತಾಗುತ್ತದೆ.

- ನಗರಗಳ ಬಳಕೆದಾರರು ಆಗಾಗ ತಾವಾಗಿ ಹೊಲಗಳಿಗೆ ಭೇಟಿ ನೀಡಬೇಕು. ಕೃಷಿಕರ ಕಷ್ಟಸುಖಗಳ ಪರಿಚಯ ಸಿಗುತ್ತದೆ. ನಿರಾಸಕ್ತ ಗ್ರಾಹಕರಾಗಿದ್ದವರು ಕ್ರಮೇಣ ಉತ್ಪಾದನೆಯ ರಂಗದಲ್ಲಿ ಸೂಕ್ಷ್ಮ ಸಂವೇದನೆಯ ಕ್ರಿಯಾಶೀಲ ಪಾಲುದಾರರಾಗಬಹುದು.

**ಬಿಕ್ಕಟ್ಟು:** ಗುಳೆ ತಡೆಗಟ್ಟಬಲ್ಲ ಗ್ರಾಮೀಣ ಜೀವನೋಪಾಯಕ್ಕೆ

**ಪರಿಹಾರ:** ಸಣ್ಣ-ಪ್ರಮಾಣದ, ಲೇಬರ್-ಇಂಟೆನ್ಸಿವ್ ಮ್ಯಾನ್ಯುಫ್ಯಾಕ್ಚರಿಂಗ್ ಮತ್ತು ಕ್ರಾಫ್ಟ್ಸ್



ಚಿತ್ರ: ಸೃಷ್ಟಿ ಬಾಜಪೈ



ಚಿತ್ರ:ಝುದುರಂ ಹಲಮಿ & ಇಜಂಸೈನ್ ಕತೆಂಗೆ



ಗಡ್‌ಚಿರೋಲಿಯ ಮಹಾ ಗ್ರಾಮಸಭೆ (ಎಡಕ್ಕೆ); ಗ್ರಾಮಸಭೆಯ ನಿಧಿಯಿಂದ ಪರಿಹಾರ ಸಾಮಗ್ರಿ ಪಡೆದ ಸಾಕೆ ಗ್ರಾಮದ ಜನ

## ಮಹಾರಾಷ್ಟ್ರದ ಕೋರ್ಚಿಯಲ್ಲಿ ಅರಣ್ಯಾಧರಿತ ಜೀವನೋಪಾಯ

೨೦೧೯ರಲ್ಲಿ ಮಹಾರಾಷ್ಟ್ರ ದ ಗಡ್‌ಚಿರೋಲಿಯ ೯೦ ಗ್ರಾಮ ಸಭೆಗಳು ಒಟ್ಟಾಗಿ ಒಂದು ಮಹಾಗ್ರಾಮಸಭೆಯನ್ನು (ಎಮ್‌ಜಿಎಸ್) ಆಯೋಜಿಸಿದವು. ಅದೇ ಎಮ್‌ಜಿಎಸ್ ಹೆಸರಿನ ಒಕ್ಕೂಟವನ್ನೂ ಸ್ಥಾಪಿಸಿಕೊಂಡವು. ತಮ್ಮ ಬದುಕನ್ನೇ ಕಸಿದುಕೊಳ್ಳಲಿದ್ದ ಒಂದು ಗಣಿಗಾರಿಕೆ ಯೋಜನೆಯನ್ನು ವಿರೋಧಿಸುವ ಉದ್ದೇಶದಿಂದ ಆರಂಭವಾದ ಈ ಒಕ್ಕೂಟ ಕ್ರಮೇಣ ಸ್ಥಳೀಯರಿಗೆ ಹೊಸ ಜೀವನೋಪಾಯವನ್ನು ಸೃಷ್ಟಿಸಬಲ್ಲ ವೇದಿಕೆಯಾಗಿಯೂ ರೂಪುಗೊಂಡಿತು. ಒಕ್ಕೂಟದ ಉದ್ದೇಶಗಳು: ತಮಗೆ ಬೇಕಿದ್ದನ್ನು ಸ್ಥಳೀಯವಾಗಿ ಉತ್ಪಾದಿಸಿಕೊಳ್ಳುವುದು, ಜೀವಿವೈವಿಧ್ಯ ರಕ್ಷಣೆಯ ಮೂಲಕ ಪರಿಸರ ಸಮತೋಲವನ್ನು ಸಾಧಿಸುವುದು, ಸಾಂಸ್ಕೃತಿಕ ಸ್ವಂತಿಕೆಯನ್ನು ಮರಳಿ ಗಳಿಸುವುದು, ಲಿಂಗಸಮಾನತೆಯಂಥವಿಷಯವನ್ನು ಕೈಗೆತ್ತಿಕೊಂಡು ಸಾಮಾಜಿಕ ಸಂಬಂಧಗಳನ್ನು ಪರಿವರ್ತಿಸುವುದು. ಆರೋಗ್ಯ ಮತು ಶಿಕ್ಷಣ ವ್ಯವಸ್ಥೆಯ ಬದಲಾವಣೆ ಸಾಧ್ಯವೇ ಎಂಬುದನ್ನು ಪರಿಶೀಲಿಸುವುದು. ಆದಿವಾಸಿಗಳೇ ಹೆಚ್ಚಿನ ಪ್ರಮಾಣದಲ್ಲಿರುವ ಈ ಪ್ರಾಂತದಲ್ಲಿ ಈ ಯಾವುದನ್ನೂ ಸಾಧಿಸಲಾಗದ ಈಗಿನ ಅಭಿವೃದ್ಧಿ ಸೂತ್ರಗಳನ್ನು ಪ್ರಶ್ನಿಸುವುದು. ಒಗ್ಗಟ್ಟಿನ ಮೇಲೆ, ಬೇರುಮೂಲದ ಪ್ರಜಾತಂತ್ರವನ್ನು ಗಟ್ಟಿಗೊಳಿಸುವುದು.

**ಬಿಕ್ಕಟ್ಟು:** ಗುಳೆ ತಡೆಗಟ್ಟಬಲ್ಲ ಗ್ರಾಮೀಣ ಜೀವನೋಪಾಯಕ್ಕೆ

**ಪರಿಹಾರ:** ಸಣ್ಣ-ಪ್ರಮಾಣದ, ಲೇಬರ್-ಇಂಟೆನ್ಸಿವ್ ಮ್ಯಾನ್ಯುಫ್ಯಾಕ್ಚರಿಂಗ್ ಮತ್ತು ಕ್ರಾಫ್ಟ್ಸ್



ಇವರ ಹೊಸ ಅನ್ವೇಷಣೆಗೆ ಕಾನೂನಿನ ಬೆಂಬಲವೂ ಇತ್ತು. ಅನುಸೂಚಿಕ ಕ್ಷೇತ್ರಕ್ಕೆಂದೇ ಮಾರ್ಪಡಿಸಿದ ೧೯೯೬ರ ಪಂಚಾಯತ್ ಕಾನೂನು ಮತ್ತು ೨೦೦೬ರ ಅರಣ್ಯ ಹಕ್ಕು ಕಾನೂನುಗಳ ಅಡಿಯಲ್ಲಿ ಒಟ್ಟು ೮೭ ಗ್ರಾಮಸಭೆಗಳು ತಾವು ವಾಸಿಸುವ ಅರಣ್ಯ ಪ್ರದೇಶಗಳ ಬಳಕೆ, ನಿರ್ವಹಣೆ ಮತ್ತು ಸಂರಕ್ಷಣೆಯ ಹಕ್ಕನ್ನು ಈ ಮೊದಲೇ ಪಡೆದಿದ್ದರು. ಎರಡು ಶತಮಾನಗಳ ಕೇಂದ್ರೀಯ ಸರಕಾರಿ ನಿಯಂತ್ರಣದಿಂದ ಅವರು ಅದಾಗಲೇ ಹೊರಕ್ಕೆ ಬಂದಿದ್ದರು. ಹಾಗಾಗಿ ಮರಮುಟ್ಟುಗಳನ್ನು ಹೊರತು ಪಡಿಸಿ ಇನ್ನಿತರ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಮಾರುತ್ತ ಇಲ್ಲಿನ ಜನರು ತಮ್ಮ ಆದಾಯವನ್ನು ಹೆಚ್ಚಿಸಿಕೊಂಡಿದ್ದಾರೆ. ಜೊತೆಗೆ ಸಮುದಾಯ ಆಧರಿತ ಅರಣ್ಯ ಸಂರಕ್ಷಣೆ ಮತ್ತು ನಿರ್ವಹಣೆಯ ಕೆಲಸವನ್ನೂ ಜತನದಿಂದ ಮಾಡುತ್ತ ಬಂದಿದ್ದಾರೆ. ಇನ್ನೂ ಮುಖ್ಯ ವಿಷಯ ಏನೆಂದರೆ, ಈ ಹೆಚ್ಚುವರಿ ಆದಾಯದಿಂದ ಗ್ರಾಮಗಳಲ್ಲಿ ಸಂಚಯಿತ ನಿಧಿಯನ್ನೂ ಸಂಗ್ರಹಿಸಿದ್ದಾರೆ. ಈ ಹಣದಿಂದ ಊರೊಟ್ಟಿನ ಅನೇಕ ವಿಧದ ಕೆಲಸಗಳನ್ನು ಕೈಗೊಂಡಿದ್ದೂ ಅಲ್ಲದೆ ಅಗತ್ಯವಿದ್ದ ಕುಟುಂಬಗಳ ಆರೋಗ್ಯ ಮತ್ತು ಶಿಕ್ಷಣದ ವೆಚ್ಚವನ್ನೂ ಭರಿಸುತ್ತಿದ್ದಾರೆ. ಉತ್ತಮ ಆದಾಯವಿದ್ದ ಗ್ರಾಮ ಸಭೆಗಳು ಇತರ ಗ್ರಾಮಸಭೆಗಳಿಗೆ ಸಾಲವನ್ನೂ ಕೊಟ್ಟಿವೆ.

ಕೋವಿಡ್ ಸಂಕಟದ ಅವಧಿಯಲ್ಲಿ ಅರಣ್ಯ ಉತ್ಪನ್ನಗಳ ಮಹತ್ವ ಎಷ್ಟೆಂಬುದನ್ನು ಅನೇಕ ಗ್ರಾಮಸಭೆಗಳು ತೋರಿಸಿಕೊಟ್ಟಿವೆ. ಕುಕ್ಡಾಳೆ, ಸಾಳ್ವೆ, ಗಹಣೆಗಟ್ಟ ಮತ್ತು ಝುಂಕರ್‌ಗೊಂಡಿ ಗ್ರಾಮಗಳಲ್ಲಿ ಭೂರಹಿತ ಶ್ರಮಿಕರಿಗೆ, ವಿಧವೆಯರಿಗೆ, ಅಂಗವಿಕಲರಿಗೆ ಮತ್ತು ವಲಸೆ ಕಾರ್ಮಿಕರ ಕುಟುಂಬಗಳಿಗೆ ಪಡಿತರ ಮೂಟೆಗಳನ್ನು ಕೊಡಲಾಗಿದೆ.

## ಪಾಠಗಳು

ನಿಸರ್ಗ ಮತ್ತು ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಯನ್ನು ಆಯಾ ಊರಿನವರೇ ಮಾಡುವಂತಾದರೆ ಎಷ್ಟೊಂದು ಅನುಕೂಲಗಳಿವೆ. ಸ್ಥಳೀಯರ ಅನುಭವಗಳನ್ನು ಆಧರಿಸಿ ಪರಿಸರ ಭದ್ರತೆಯನ್ನು, ಆದಾಯ ಭದ್ರತೆಯನ್ನು ಹಾಗೂ ನೆಲಮೂಲದ ಪ್ರಜಾತಂತ್ರವನ್ನು ಗಟ್ಟಿಗೊಳಿಸಲು ಸಾಧ್ಯವಾಗುತ್ತದೆ. ಭಾರತದಲ್ಲಿ ಇದುವರೆಗೆ ಜಾರಿಯಲ್ಲಿರುವ ರಾಜಕೀಯ ಮತ್ತು ಆರ್ಥಿಕ ಮಾದರಿಗಳು ಇದರ ತದ್ವಿರುದ್ಧವಾಗಿದ್ದು ಅವು ಕಾರ್ಪೊರೇಟ್ ಶಕ್ತಿಗಳನ್ನು ಪ್ರಬಲಗೊಳಿಸುವ ಕೇಂದ್ರೀಕೃತ ವ್ಯವಸ್ಥೆಗಳಾಗಿವೆ. ಇಂಥ ಮಾದರಿಗಳನ್ನು ಬುಡಸಮೇತ ಬದಲಿಸಬೇಕಾದ ಅಗತ್ಯವಿದೆ.

## ಸಂಪರ್ಕಕ್ಕೆ

ಸಿಯಾರಾಮ್ ಹಲಮಿ. 9420145861

**ಬಿಕ್ಕಟ್ಟು:** ಗುಳೆ ತಡೆಗಟ್ಟಬಲ್ಲ ಗ್ರಾಮೀಣ ಜೀವನೋಪಾಯಕ್ಕೆ

**ಪರಿಹಾರ:** ಸಣ್ಣ-ಪ್ರಮಾಣದ, ಲೇಬರ್-ಇಂಟೆನ್ಸಿವ್ ಮ್ಯಾನ್ಯುಫ್ಯಾಕ್ಚರಿಂಗ್ ಮತ್ತು ಕ್ರಾಫ್ಟ್ಸ್



ಚಿತ್ರ: ಮಂಜರಿ ಅಶೋಕ್



(ಎಡದಿಂದ) ೧. ಮುಖವಾಡಗಳ ಉತ್ಪಾದನೆಯಲ್ಲಿ ತೊಡಗಿದ ಕೇರಳದ ತಿರುವನಂತಪುರದ ಕುಡುಂಬಶ್ರೀ ಸದಸ್ಯೆಯರು ೨. ಕೊಲ್ಲಂ ಜಿಲ್ಲೆಯ ಕುಡುಂಬಶ್ರೀ ಸದಸ್ಯೆಯರು ಕಿರಾಣಿ ಸಾಮಾನುಗಳ ಮೂಟೆಯನ್ನು ಸಿದ್ಧಗೊಳಿಸುತ್ತಿರುವುದು ೩. ಅಳಪುಝಾ ಜಿಲ್ಲೆಯ ಮನ್ನಂಚೆರಿ ಪಂಚಾಯತಕ್ಕೆ ಸೇರಿದ ಕುಡುಂಬಶ್ರೀ ಮಹಿಳೆಯರು ಜಾನಕೀಯ ಹೊಟೆಲ್‌ನಲಿ ಆಹಾರಪೊಟ್ಟಣಗಳನ್ನು ಸಜ್ಜುಗೊಳಿಸುತ್ತಿರುವುದು.

# ಕೇರಳದ ಕುಡುಂಬಶ್ರೀ

ಕೇರಳ ರಾಜ್ಯದ ಬಡತನ ನಿರ್ಮೂಲನಾ ಯೋಜನೆಯ ಅಂಗವಾಗಿ ೧೯೯೮ರಲ್ಲಿ ಕುಡುಂಬಶ್ರೀ ಎಂಬ ಸಂಘಟನೆಯನ್ನು ಆರಂಭಿಸಲಾಯಿತು. ಹಳ್ಳಿಯ ಮತ್ತು ನಗರದ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣದ ಉದ್ದೇಶದಿಂದ ನೆರೆಹೊರೆಯವರೇ ಕಟ್ಟಿಕೊಂಡ ಸಂಘಟನೆ ಅದು. ಊರಿನ ಅಥವಾ ಮುನಿಸಿಪಾಲಿಟಿಯ ಪ್ರತಿಯೊಬ್ಬ ಮಹಿಳೆಯನ್ನೂ ಸ್ಥಳೀಯವಾಗಿ ಸಂಘಟಿಸುವುದು ಇದರ ಮುಖ್ಯ ಉದ್ದೇಶ. ಸರಕಾರಿ ಅಭಿವೃದ್ಧಿ ಯೋಜನೆಗಳು ಯಾವುದೇ ಇದ್ದರೂ- ಅದು ಪಡಿತರ ವಿತರಣೆ, ಆರೋಗ್ಯ ವಿಮೆ, ಗೃಹನಿರ್ಮಾಣ, ಉದ್ಯೋಗಾವಕಾಶ ನಿರ್ಮಾಣ ಅಥವಾ ರಾಷ್ಟ್ರೀಯ ವೇತನ ಉದ್ಯೋಗ ಯೋಜನೆ ಅಥವಾ ಜಾಗೃತ ಸಮಿತಿ ಹೀಗೆ ಎಲ್ಲದರಲ್ಲೂ ಮಹಿಳೆಯರನ್ನು ಪಾಲುದಾರರನ್ನಾಗಿ ಮಾಡಿ ಸ್ಥಳೀಯ ಸ್ವಯಮಾಡಳಿತದಲ್ಲಿ ತೊಡಗಿಸುವುದು. ಸರಕಾರ ವೆಚ್ಚ ಮಾಡುವ ಹಣದ ಬಹುಪಾಲು ಈ ಮಹಿಳೆಯರಿಗೇ ಸೇರುವಂತೆ, ವಿಧವಿಧವಾದ ಉತ್ಪಾದನೆಗಳನ್ನು ಗೃಹೋಪಯೋಗಿ ವಸ್ತುಗಳು, ಕೃಷಿ ಸಂಸ್ಕರಣೆ, ಕರಕುಶಲ ವಸ್ತುಗಳು ಮುಂತಾದವೆಲ್ಲ ಮಹಿಳೆಯರ ಕೈಯಿಂದಲೇ ತಯಾರಾಗುವಂತೆ ಮಾಡಿ, ಲಕ್ಷಾಂತರ ಜನರು ಅವರಿರುವ ಸ್ಥಳದಲ್ಲೇ ಜೀವನೋಪಾಯವನ್ನು ಕಂಡುಕೊಳ್ಳುವಂತೆ ಮಾಡಿರುವುದು ಇದರ ಹೆಚ್ಚಳ.

ಕೋವಿಡ್ ಸಂಕಟಕಾಲದಲ್ಲಿ ಪರಿಹಾರ ಕಾರ್ಯಗಳನ್ನು ನಿಭಾಯಿಸುವಲ್ಲಿ ಸರಕಾರ ಮತ್ತು ಸಮುದಾಯದ ನಡುವಣ ಮಹತ್ವದ ಕೊಂಡಿಯಾಗಿ ಈ ಸಂಘಟನೆ ತನ್ನ ಪಾತ್ರವನ್ನು ನಿರ್ವಹಿಸಿದೆ. ಕಾಯಿಲೆಯಿಂದಾಗಿ ಮನೆಯಲ್ಲೇ ಕ್ವಾರಂಟೈನ್ ಆದವರಿಗೆ ಹಾಗೂ ಅಗತ್ಯವಿದ್ದ ಇತರರಿಗೆ ಊಟದ ವ್ಯವಸ್ಥೆಗೆಂದು ಪ್ರತಿ ಊರಲ್ಲಿ ಊರೊಟ್ಟಿನ ಪಾಕಶಾಲೆಯನ್ನು ಕುಡುಂಬಶ್ರೀ ನಿರ್ವಹಿಸಿದೆ. ಜೊತೆಗೆ ಕೋವಿಡ್ ಕಾಲದ ಜನಜಾಗೃತಿಯ ಅಂಗವಾಗಿ ಸರಕಾರಿ ಸೂಚನೆಗಳನ್ನು ಸಂತ್ರಸ್ತರಿಗೆ ರವಾನಿಸುವ ಸಹಾಯವಾಣಿಯಾಗಿಯೂ ಇದು ಕೆಲಸ ಮಾಡುತ್ತಿದೆ.

**ಬಿಕ್ಕಟ್ಟು:** ಗುಳೆ ತಡೆಗಟ್ಟಬಲ್ಲ ಗ್ರಾಮೀಣ ಜೀವನೋಪಾಯಕ್ಕೆ

**ಪರಿಹಾರ:** ಸಣ್ಣ-ಪ್ರಮಾಣದ, ಲೇಬರ್-ಇಂಟೆನ್ಸಿವ್ ಮ್ಯಾನ್ಯುಫ್ಯಾಕ್ಚರಿಂಗ್ ಮತ್ತು ಕ್ರಾಫ್ಟ್ಸ್



ಸುಮಾರು ೩೦೦ ಹೊಲಿಗೆ ಘಟಕಗಳ ಮೂಲಕ ೨೦ ಲಕ್ಷಕ್ಕೂ ಹೆಚ್ಚು ಮುಖವಾಡಗಳನ್ನು ತಯಾರಿಸಿ ವಿತರಿಸಲಾಗಿದೆ. ಸುಮಾರು ೫೦೦೦ ಲೀಟರ್ ಸ್ಯಾನಿಟೈಸರ್ ದ್ರವವನ್ನು ೨೧ ಕಿರುಉದ್ಯಮಗಳ ಮೂಲಕ ಉತ್ಪಾದಿಸಲಾಗಿದೆ. ಕೋವಿಡ್-೧೯ ರೋಗಿಗಳ ಶುಶ್ರೂಷೆ ಮಾಡುವವರ ಬಳಕೆಗೆಂದು ಕುಡುಂಬಶ್ರೀ ಘಟಕಗಳಲ್ಲಿ ಮುಖಕವಚಗಳನ್ನು ಉತ್ಪಾದಿಸಲಾಗುತ್ತಿದೆ.

## ಪಾಠಗಳು

ಸ್ವಯಮಾಡಳಿತ, ಅಂದರೆ ಊರಿನ ಜನರ ಕೈಗೇ ಆಡಳಿತವನ್ನು ಕೊಡುವುದು, ಮಹಿಳೆಯರ ಕೈಗಳನ್ನು ಸಶಕ್ತಗೊಳಿಸುವುದು, ಯಾವುದೇ ಸಾಮೂಹಿಕ ಹೊಣೆಗಾರಿಕೆಯನ್ನು ಸಮುದಾಯಕ್ಕೇ ಒಪ್ಪಿಸುವುದು -ಈ ಎಲ್ಲ ಕ್ರಮಗಳೂ  ಸಂಕಟಸಮಯದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಎಲ್ಲ ನಿರ್ಧಾರಗಳೂ ಒಂದೇ ಕೇಂದ್ರದ ಮುಷ್ಟಿಯಲ್ಲಿದ್ದರೆ ಯಾವುದೂ ಸರಿಹೋಗುವುದಿಲ್ಲ ಎಂಬುದು ನಮಗೆ ಈಗಿನ ಅನುಭವದಲ್ಲಿ ಕಂಡುಬಂದಿದೆ. ಸಂಕಷ್ಟಗಳನ್ನು ನಿರ್ವಹಿಸುವ ಎಲ್ಲ ನಿರ್ಧಾರಗಳನ್ನೂ ರಾಜ್ಯ ಸರಕಾರಗಳಿಗೇ ಬಿಟ್ಟುಬಿಡಬೇಕು. ಅವು ತಮ್ಮ ಕಾನೂನುಗಳನ್ನು ತಾವೇ ರೂಪಿಸಬೇಕು ಮತ್ತು ಅದನ್ನು ಜಾರಿಗೊಳಿಸುವ ಹೊಣೆಯನ್ನು ಸ್ಥಳೀಯ ಸಂಘಟನೆಗಳಿಗೇ ನೀಡುವ ಮೂಲಕ ಇನ್ನಷ್ಟು ವಿಕೇಂದ್ರೀಕರಣಕ್ಕೆ ದಾರಿಮಾಡಿಕೊಡಬೇಕು.

## ಸಂಪರ್ಕಕ್ಕೆ

ed@kudumbashree.org, 0471-2554717

ಚಿತ್ರ: ಮಂಜರಿ  ಅಶೋಕ್




(ಎಡದಿಂದ) ೧. ಕೇರಳದ ಪಟ್ಟಣಂತಿಟ್ಟ ಜಿಲ್ಲೆಯ ಗಿರಿಜನರಿಗೆ ಆಹಾರ ಪೊಟ್ಟಣಗಳ ವಿತರಣೆ (೨) ಅದೇ ಜಿಲ್ಲೆಯ ಕುಡುಂಬಶ್ರೀ ಸದಸ್ಯೆಯರು ಮುಖವಾಡಗಳ ತಯಾರಿಕೆಯಲ್ಲಿ ನಿರತ (೩) ಕೋಳಿಕ್ಕೋಡ್ ಜಿಲ್ಲೆಯಲ್ಲಿ ಸ್ಯಾನಿಟೈಸರ್ ಉತ್ಪಾದನೆಯಲ್ಲಿ ತೊಡಗಿದ ಕುಡುಂಬಶ್ರೀ ಸದಸ್ಯೆಯರು (೪) ಅಳಪ್ಪುಝಾ ಜಿಲ್ಲೆಯ ಕೈನಕಾರಿ ಪಂಚಾಯತದಲ್ಲಿ ಸಂಚಾರಿ ಸೂಪರ್‌ಮಾರ್ಕೆಟ್

**ಬಿಕ್ಕಟ್ಟು:** ಗುಳೆ ತಡೆಗಟ್ಟಬಲ್ಲ ಗ್ರಾಮೀಣ ಜೀವನೋಪಾಯಕ್ಕೆ

**ಪರಿಹಾರ:** ಸಣ್ಣ-ಪ್ರಮಾಣದ, ಲೇಬರ್-ಇಂಟೆನ್ಸಿವ್ ಮ್ಯಾನ್ಯುಫ್ಯಾಕ್ಚರಿಂಗ್ ಮತ್ತು ಕ್ರಾಫ್ಟ್ಸ್



ಚಿತ್ರ ಕೃಪೆ: ಸಮಾಜ್ ಪ್ರಗತಿ ಸಹಯೋಗ




(ಎಡಕ್ಕೆ) ಮಣ್ಣಿನ ಅಣೆಕಟ್ಟಿನ ನಿರ್ಮಾಣ (ಬಲಕ್ಕೆ) ಸೇವನ್‌ಪಂತಿ ಹಳ್ಳದಲ್ಲಿ ಜಲಸಂಗ್ರಹಣೆಯ ದೃಶ್ಯ

# ಮಧ್ಯಭಾರತದಲ್ಲಿ ಜಲಭದ್ರತೆ ಮತ್ತು ಜೀವನೋಪಾಯ

ಮಧ್ಯಪ್ರದೇಶದ 'ಸಮಾಜ್ ಪ್ರಗತಿ ಸಹಯೋಗ್' (ಎಸ್‌ಪಿಎಸ್) ಎಂಬುದು ಭಾರತದ ಅತಿ ದೊಡ್ಡ ಸ್ವಯಂಸೇವಾ ಸಂಘಗಳಲ್ಲೊಂದು. ಅದರ ಮುಖ್ಯ ಕಚೇರಿ ದೇವಾಸ್‌ನಲ್ಲಿದೆ. ಅದು ಇತರ ಸಹಯೋಗಿ ಸಂಘಟನೆಗಳೊಂದಿಗೆ ಸೇರಿ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದ ೭೨ ಜಿಲ್ಲೆಗಳ ಲಕ್ಷಾಂತರ ಹೆಕ್ಟೇರ್ ಭೂಮಿಯಲ್ಲಿ ವಿವಿಧ ಯೋಜನೆಗಳನ್ನು ಹಮ್ಮಿಕೊಂಡಿದೆ. ಕಳೆದ ಮೂರು ದಶಕಗಳಿಂದ ಅದು ಆದಿವಾಸಿ ಸಮುದಾಯಕ್ಕೆ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ನೀರಿನ ನಿರ್ವಹಣೆಯ ಮೂಲಕ ಕೃಷಿ ಮತ್ತು ಇತರ ಜೀವನೋಪಾಯಕ್ಕೆ ನೆರವಾಗುತ್ತಿದೆ. ಅದರ ಮುಖ್ಯ ಉದ್ದೇಶಗಳು: ಸಮಪಾಲಿನ, ಸುಸ್ಥಿರ ವಿಧಾನಗಳ ಮೂಲಕ ನಿರ್ಲಕ್ಷಿತ ಸಮುದಾಯದ, ಅದರಲ್ಲೂ ವಿಶೇಷವಾಗಿ ಮಹಿಳೆಯರ ಸಬಲೀಕರಣದ ಮಾದರಿಗಳನ್ನು ರೂಪಿಸುವುದು.

ಕುಡಿಯುವ ನೀರು ಮತ್ತು ಕೃಷಿ ನೀರಾವರಿಯ ವಿಷಯದಲ್ಲಿ ಸುಮಾರು ೧೨೦ ಗ್ರಾಮಗಳನ್ನು ಸ್ವಾವಲಂಬಿಯಾಗಿ ಮಾಡಿದ್ದು ಅದರ ಪ್ರಮುಖ ಸಾಧನೆ. ಇದರ ಪರಿಣಾಮವಾಗಿ ಕೃಷಿಯ ಉತ್ಪಾದನೆ ಭರದಿಂದ ಏರಿತು. ಕೂಲಿಗಾಗಿ ವಲಸೆ ಹೋಗುವ ಪ್ರಮಾಣ ಶೇಕಡಾ ೮೦ ರಷ್ಟು ಕಡಿಮೆಯಾಯಿತು. ಪಶುಸಂಗೋಪನೆಯಂಥ ಕೃಷಿಪೂರಕ ಚಟುವಟಿಕೆಗಳು ಹೆಚ್ಚಿದವು. ಸುಮಾರು ೬೦೦೦ ಸಾವಿರ ಹೆಕ್ಟೇರ್‌ಗಳಲ್ಲಿ ಪೀಡೆನಾಶಕ ರಸಾಯನಗಳ ಬಳಕೆಯಿಲ್ಲದೆ ಬೇಸಾಯ ಮಾಡುವುದನ್ನು ಪ್ರೋತ್ಸಾಹಿಸಲಾಯಿತು. ೨೦೧೮ರ ವೇಳೆಗೆ ೫೦೦ಕ್ಕೂ ಹೆಚ್ಚು ಸ್ವಸಹಾಯ ಸಂಘಗಳು ೫೦೦ ಗ್ರಾಮಗಳಲ್ಲಿ ಮತ್ತು ೧೫ ಪಟ್ಟಣಗಳಲ್ಲಿ ಅಸ್ತಿತ್ವಕ್ಕೆ ಬಂದವು. ಅವುಗಳಲ್ಲಿ ೩೦೦ಕ್ಕೂ ಹೆಚ್ಚು ಸ್ವಸಹಾಯ ಸಂಘಗಳ ೪೮೦೦ ಮಹಿಳೆಯರು 'ರಾಮ್ ರಹೀಮ್ ಪ್ರಗತಿ ಪ್ರೊಡ್ಯೂಸರ್ ಕೋಆಪರೇಟಿವ್ ಲಿಮಿಟೆಡ್' (ಆರ್‌ಆರ್‌ಪಿಪಿಸಿಎಲ್) ಹೆಸರಿನ ಸಹಕಾರಿ ಸಂಸ್ಥೆಯನ್ನು ಕಟ್ಟಿಕೊಂಡರು. ಆರೋಗ್ಯ ಮತ್ತು ಪೋಷಕಾಂಶ ಸುಧಾರಣೆ ಕುರಿತಂತೆ ಜನಜಾಗೃತಿ ಉಂಟುಮಾಡುವುದೂ ಅದರ ಕಾರ್ಯಸೂಚಿಗಳಲ್ಲಿ ಸೇರ್ಪಡೆಯಾಗಿತ್ತು. ಸಬಲೀಕರಣವೇ ಪ್ರಮುಖ ಉದ್ದೇಶವುಳ್ಳ 'ಬಾಬಾ ಆಮ್ಟೆ ಸೆಂಟರ್ ಫಾರ್ ಪೀಪಲ್ಸ್ ಎಂಪವರ್ಮೆಂಟ್' ಸಂಸ್ಥೆಯ

ನೆರವಿನಿಂದ ಬೇರೆ ಊರುಗಳ ಜನರೂ ಇಲ್ಲಿಗೆ ಬಂದು ಎಸ್‌ಪಿಎಸ್‌ನ ಅನುಭವಗಳಿಂದ ಪಾಠ ಕಲಿಯಲು ಅವಕಾಶವನ್ನೂ ಕಲ್ಪಿಸಲಾಗಿತ್ತು.

ಕೋವಿಡ್ ಸಂಕಟಕಾಲದಲ್ಲಿ ಮಧ್ಯಪ್ರದೇಶದ ದೇವಾಸ್ ಮತ್ತು ಖರಗಾಂವ್ ಜಿಲ್ಲೆಗಳ ೧೩,೦೦೦ ಕುಟುಂಬಗಳಿಗೆ ಎಸ್‌ಪಿಎಸ್ ಮೂಲಕ ಪರಿಹಾರ ಸಾಮಗ್ರಿಗಳನ್ನು ಒದಗಿಸಲಾಯಿತು. ಅರ್ಹ ಫಲಾನುಭವಿಗಳನ್ನು ಗುರುತಿಸುವಲ್ಲಿ ಮತ್ತು ವಿತರಿಸುವಲ್ಲಿ ಎಸ್‌ಪಿಎಸ್‌ನ ಸ್ವಸಹಾಯ ಸಂಘಗಳು ನೆರವಿಗೆ ಬಂದವು. ಇಲ್ಲೊಂದು ವಿಶೇಷವಿದೆ: ಸರಕಾರಿ ಗೋದಾಮುಗಳಿಂದ ಬಂದ ಧಾನ್ಯಗಳನ್ನು ವಿತರಿಸುವ ಬದಲು ಆರ್‌ಆರ್‌ಪಿಪಿಸಿಎಲ್ ಸಹಕಾರಿ ಸಂಘದ ಮೂಲಕ ಸ್ಥಳೀಯ ರೈತರಿಂದಲೇ ಗೋಧಿಯನ್ನು ಖರೀದಿಸಲಾಯಿತು. ಗೋಧಿ ಬೆಳೆಗಾರರು ಲಾಕ್‌ಡೌನ್ ಅವಧಿಯಲ್ಲಿ ಗಿರಾಕಿಗಳಿಲ್ಲದೇ ಅಗ್ಗದ ಬೆಲೆಗೆ ತಮ್ಮ ಉತ್ಪನ್ನಗಳನ್ನು ಮಾರಬಹುದಾದ ಸಂದರ್ಭ ಇದರಿಂದಾಗಿ ತಪ್ಪಿತು. ಸಹಕಾರಿ ಸಂಘವೇ ಮುಂದಾಗಿ ಗೋಧಿಯನ್ನು ಹಿಟ್ಟು ಮಾಡಿಸಿ ೩೮ ಲಕ್ಷ ರೂಪಾಯಿ ಮೌಲ್ಯದ ೧೧೮.೪ ಟನ್ ಹಿಟ್ಟನ್ನು ಪರಿಹಾರದ ಚೀಲಗಳಿಗೆ ತುಂಬಿಸಿಕೊಟ್ಟಿತು. ಇದರಿಂದ ಮೂರು ಬಗೆಯ ಅನುಕೂಲಗಳಾದವು. ರೈತರ ಫಸಲಿಗೆ ಸೂಕ್ತ ಬೆಲೆ ಸಿಕ್ಕಿತು. ಸಹಕಾರಿ ಸಂಘದ ಶೇರುದಾರರ ಲಾಭಾಂಶದಲ್ಲಿ ಹೆಚ್ಚಳವಾಯಿತು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ತೀರ ಸಂಕಷ್ಟದಲ್ಲಿರುವ ತಳ ಸಮುದಾಯಕ್ಕೆ ಆದ್ಯತೆಯ ಮೇರೆಗೆ ಅಗತ್ಯ ಆಹಾರವಸ್ತುಗಳ ನೆರವು ಸಿಕ್ಕಿತು. ಸ್ಥಳೀಯ ಜನರ ಬದುಕಿನಮಟ್ಟವನ್ನು ಇನ್ನಷ್ಟು ಎತ್ತರಿಸುವ ದೀರ್ಘ ಕಾಲೀನ ಕ್ರಮಗಳನ್ನು ರೂಪಿಸುವಲ್ಲಿ ಎಸ್‌ಪಿಎಸ್ ಮುಂದಿನ ಕಾರ್ಯಸೂಚಿಯನ್ನು ರೂಪಿಸುತ್ತಿದೆ.

## ಪಾಠಗಳು

ಸ್ವಸಹಾಯ ಸಂಘಗಳ ಮೂಲಕ ಗ್ರಾಮೀಣ ಜನರ, ಅದರಲ್ಲೂ ವಿಶೇಷವಾಗಿ ಮಹಿಳೆಯರ ಸಬಲೀಕರಣ ಸಾಧ್ಯವಾದರೆ ಸ್ಥಳೀಯ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ, ಅಷ್ಟೇ ಅಲ್ಲ, ಗುಳೆ ಹೋಗುವುದನ್ನು ತಡೆಗಟ್ಟುವ ಮೂಲಕ ಸಂಕಟಕಾಲದಲ್ಲಿ ಸರಕಾರಿ ಪರಿಹಾರವನ್ನು ಅವಲಂಬಿಸದೆ ಸ್ವಂತಬಲದಿಂದ ಪುಟಿದೇಳುವ ತಾಕತ್ತನ್ನೂ ನೆಲಮೂಲದ ಜನರಿಗೆ ಕೊಡುತ್ತದೆ.

## ಸಂಪರ್ಕಕ್ಕೆ

ಮಿಹಿರ್ ಶಾ mihirbhai25@gmail.com

ಚಿತ್ರ ಕೃಪೆ: ಸಮಾಜ್ ಪ್ರಗತಿ ಸಹಯೋಗ







(ಎಡಕ್ಕೆ) ಸಮಾಜ ಪರಿವರ್ತನ ಸಹಯೋಗ (ಎಸ್‌ಪಿಎಸ್) ಮೂಲಕ ಕೋವಿಡ್-೧೯ರ ಪರಿಹಾರ ಸಾಮಗ್ರಿ ವಿತರಣೆ (ಬಲಕ್ಕೆ) ದೇವಾಸ್ ಜಿಲ್ಲೆಯ ಹಾಟ್‌ಪಿಪ್ಲಿಯಾ ಪಟ್ಟಣದಲ್ಲಿ ಎಸ್‌ಪಿಎಸ್ ಸ್ವಸಹಾಯ ಸಂಘಗಳ ಸಮಾವೇಶ

**ಬಿಕ್ಕಟ್ಟು:** ಗುಳೆ ತಡೆಗಟ್ಟಬಲ್ಲ ಗ್ರಾಮೀಣ ಜೀವನೋಪಾಯಕ್ಕೆ

**ಪರಿಹಾರ:** ಸಣ್ಣ-ಪ್ರಮಾಣದ, ಲೇಬರ್-ಇಂಟೆನ್ಸಿವ್ ಮ್ಯಾನ್ಯುಫ್ಯಾಕ್ಚರಿಂಗ್ ಮತ್ತು ಕ್ರಾಫ್ಟ್ಸ್



ಚಿತ್ರ ಕೃಪೆ: ಖೋಜ್





(ಎಡಕ್ಕೆ) ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ರಾಹೂ ಗ್ರಾಮಸಭೆಯ ಒಂದು ನೋಟ (ಬಲಕ್ಕೆ) ಬಿದಿರಿನ ಗೋದಾಮು

# ಮಹಾರಾಷ್ಟ್ರದ ಮೇಲ್ಘಾಟ್ ಪ್ರಾಂತದಲ್ಲಿ ಅರಣ್ಯ ಹಕ್ಕುಗಳನ್ನು ಪಡೆದ ಗ್ರಾಮಗಳು

ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ಮೇಲ್‌ಘಾಟ್ ಗುಡ್ಡಗಳ ತಪ್ಪಲಿನಲ್ಲಿರುವ ಪೇವಿಹಿರ್ ಮತ್ತಿತರ ಹಳ್ಳಿಗಳಲ್ಲಿ ಅರಣ್ಯ ಸಂರಕ್ಷಣೆಯ ನೂತನ ಮಾದರಿಗಳನ್ನು ನೋಡಬಹುದು. ೨೦೦೬ರ ಅರಣ್ಯ ಹಕ್ಕು ಕಾಯಿದೆಯ (ಎಫ್‌ಆರ್‌ಎ) ಅಡಿಯಲ್ಲಿ ಅವರು 'ಸಮುದಾಯ ಅರಣ್ಯ ಸಂಪನ್ಮೂಲ' (ಸಿಎಫ್‌ಆರ್) ಹಕ್ಕುಗಳನ್ನು ಪಡೆದಿದ್ದಾರೆ. ಅರಣ್ಯ ಸಂರಕ್ಷಣೆ ಅಷ್ಟೇ ಅಲ್ಲ, ಹಾಳುಬಿದ್ದ ಅರಣ್ಯವನ್ನು ಮತ್ತೆ ಊರ್ಜಿತಕ್ಕೆ ತಂದಿದ್ದಾರೆ. ಸರಕಾರದ ಮತ್ತು ಸರಕಾರೇತರ ಸ್ವಯಂಸೇವಾ ಸಂಘಟನೆಗಳ ನೆರವಿನಿಂದ ಅಲ್ಲಿನ ಗ್ರಾಮಸಭೆಗಳು ಉದ್ಯೋಗಖಾತ್ರಿ ಯೋಜನೆಗಳ ಮೂಲಕ ಮೀನುಗಾರಿಕೆ, ಪಶುಸಂಗೋಪನೆ, ಸಾವಯವ ಬೇಸಾಯಕ್ಕೆ ಬೇಕಾದ ಸೌಕರ್ಯಗಳನ್ನು ತಮ್ಮದಾಗಿಸಿಕೊಂಡು ಜನರ ವರಮಾನವನ್ನು ಹೆಚ್ಚಿಸಿವೆ. ಹಳ್ಳಗಳ ಬಾಂಧಾರ (ಅಡ್ಡಗಟ್ಟೆ)ಗಳಲ್ಲಿನ ಹೂಳನ್ನು ಎತ್ತಿ ಕೃಷಿಭೂಮಿಗೆ ಸಾಗಿಸುವುದರಿಂದ ಕೃಷಿ ಉತ್ಪನ್ನ ಮೂರು-ನಾಲ್ಕು ಪಟ್ಟು ಹೆಚ್ಚಾಗಿದೆ. ಅರಣ್ಯ ಸಂರಕ್ಷಣೆಯ ಕ್ರಮಗಳಿಂದಾಗಿ ವನ್ಯಜೀವಿಗಳ ಸಂಖ್ಯೆಯೂ ಹೆಚ್ಚಿದೆ.

ಕೋವಿಡ್ ಸಂಕಟದ ದಿನಗಳಲ್ಲಿ ಪೇವಿಹಿರ್ ತನಗೆ ತಾನೇ ದಿಗ್ಬಂಧನ ಹಾಕಿಕೊಂಡಿತು. ತೀರ ಅಗತ್ಯ ಸಾಮಗ್ರಿಗಳನ್ನು ಪೂರೈಸುವವರಿಗೆ ವಾರಕ್ಕೊಮ್ಮೆ ಪ್ರವೇಶವನ್ನು ನಿಗದಿಪಡಿಸಿ, ಗ್ರಾಮಕ್ಕೆ ಬರುಹೋಗುವವರ ವ್ಯವಸ್ಥಿತ ದಾಖಲೆ ಇಡತೊಡಗಿತು. ಕೃಷಿ ಮತ್ತು ಅರಣ್ಯ ಉತ್ಪನ್ನಗಳ ನಿರ್ವಹಣೆ ಮಾಡುತ್ತಿದ್ದ ಹೊರಗಿನ ಕೂಲಿಗಳನ್ನು ಹೊರಕ್ಕೇ ಇಟ್ಟು, ಸ್ಥಳೀಯ ಶ್ರಮಿಕರ ದಿನಚರಿಯನ್ನು ಬದಲಾಯಿಸಿ, ಅಗತ್ಯ ಕಾಮಗಾರಿಗಳು ಲಾಕ್‌ಡೌನ್‌ನಿಂದಾಗಿ ನಿಲ್ಲದಂತೆ ನೋಡಿಕೊಂಡಿತು. ಒಂದು ಸ್ವಸಹಾಯ ಗುಂಪಿನವರು ಮುಖವಾಡಗಳ ತಯಾರಿಕೆಯಲ್ಲಿ ತೊಡಗಿದರೆ ಇನ್ನೊಂದು ಗುಂಪಿನವರು ಪಡಿತರ ವಿತರಣೆಯ ಉಸ್ತುವಾರಿಯನ್ನು ನೋಡಿಕೊಂಡರು.

**ಬಿಕ್ಕಟ್ಟು:** ಗುಳೆ ತಡೆಗಟ್ಟಬಲ್ಲ ಗ್ರಾಮೀಣ ಜೀವನೋಪಾಯಕ್ಕೆ

**ಪರಿಹಾರ:** ಸಣ್ಣ-ಪ್ರಮಾಣದ, ಲೇಬರ್-ಇಂಟೆನ್ಸಿವ್ ಮ್ಯಾನ್ಯುಫ್ಯಾಕ್ಚರಿಂಗ್ ಮತ್ತು ಕ್ರಾಫ್ಟ್ಸ್



ರಾಹೂ ಗ್ರಾಮದ ಜನರು ಇನ್ನೂ ಉತ್ತಮ ಕೆಲಸಗಳನ್ನು ಕೈಗೊಂಡರು. ಸಿಎಫ್ಆರ್ ಹಕ್ಕುಗಳನ್ನು ಪಡೆದಿದ್ದರಿಂದ ಕಳೆದ ಐದು ವರ್ಷಗಳಲ್ಲಿ ಬಿದಿರು ಮತ್ತು ಬೀಡಿ ಕಟ್ಟಲು ಬಳಸುವ ತೇಂದೂ ಎಲೆಗಳ ಸಂಗ್ರಹ ಮತ್ತು ಮಾರಾಟದಿಂದಾಗಿ ಗ್ರಾಮಸಭೆಗೆ ಸುಮಾರು ಮೂರು ಕೋಟಿ ರೂಪಾಯಿಗಳಿಗೂ ಮಿಕ್ಕಿ ಆದಾಯ ಬಂದಿತ್ತು. ಕೊರೊನಾ ಸಂಕಟ ಸಮಯದಲ್ಲಿ ಪ್ರತಿ ಕುಟುಂಬಕ್ಕೂ ೧೦,೦೦೦ ರೂಪಾಯಿಗಳನ್ನು ವಿತರಿಸಿತ್ತು. ರಾಹೂ ಗ್ರಾಮವೂ ತನ್ನ ಗಡಿಗಳನ್ನು ಮುಚ್ಚಿ ಒಬ್ಬನೇ ಒಬ್ಬ ಸ್ಥಳೀಯ ವ್ಯಕ್ತಿಯ ಮೂಲಕ ಅಗತ್ಯ ವಸ್ತುಗಳನ್ನು ತರಿಸಿಕೊಳ್ಳತೊಡಗಿತು. ಇತರರು ಎಂದಿನಂತೆ ತಂತಮ್ಮ ಹೊಲಗೆಲಸದಲ್ಲಿ ತೊಡಗಿಕೊಂಡರು. ಅರಣ್ಯದಲ್ಲಿ ಬಿದಿರು ಮತ್ತು ಮಹುವಾ ಹೂವುಗಳ ಕೊಯ್ಲಿನ ಕೆಲಸ ಆರಂಭವಾಯಿತು. ಸುಮಾರು ನೂರು ಕುಟುಂಬಗಳು ತಲಾ ಒಂದೊಂದು ಕ್ವಿಂಟಾಲ್ ಹೂಗಳನ್ನು ಸಂಗ್ರಹಿಸಿದರು. ಆದರೆ ಅವನ್ನು ಈಗಲೇ ಮಾರಲು ಹೋದರೆ ಕೊರೊನಾ ಕಾಲದ ಬೆಲೆಕುಸಿತದಿಂದಾಗಿ ಶ್ರಮಿಕರಿಗೆ ಭಾರೀ ಹಾನಿಯಾದೀತೆಂದು ಗ್ರಾಮಸಭೆಯೇ ಅಷ್ಟನ್ನೂ ಖರೀದಿಸಿ ದಾಸ್ತಾನು ಇಟ್ಟು ಆಮೇಲೆ ಮಾರಲೆಂದು ಸ್ಥಳೀಯ ಬ್ಯಾಂಕ್‌ಗಳ ಸಹಕಾರವನ್ನೂ ಪಡೆದಿದೆ. ಮುಂದಿನ ಒಂದು ತಿಂಗಳಲ್ಲಿ ಬಿದಿರಿನ ಕೊಯ್ಲು ನಡೆಯಲಿದೆ. ಅವನ್ನೆಲ್ಲ ಮುಂದಿನ ದಿನಗಳಲ್ಲಿ ತೆರೆದ ಲಿಲಾವಿನಲ್ಲಿ ಮಾರುವ ಆಲೋಚನೆ ಗ್ರಾಮಸಭೆಗಿದೆ. ಬೇಡಿಕೆ ಎಷ್ಟಿರುತ್ತದೆ ಎಂಬುದು ಗೊತ್ತಿಲ್ಲವಾದರೂ ಒಂದಲ್ಲ ಒಂದು ಮಾರ್ಗ ತೆರೆದುಕೊಳ್ಳುತ್ತದೆಂಬ ಆಶಾವಾದ ಅಲ್ಲಿ ನೆಲೆಸಿದೆ.

## ಪಾಠಗಳು

ಅರಣ್ಯ ಹಕ್ಕು ಕಾಯಿದೆಯಂಥ ಕಾನೂನುಗಳ ಸೂಕ್ತ ನೆರವನ್ನು ಪಡೆದು ಸರಕಾರದ ಮತ್ತು ಸ್ಥಳೀಯ ಸಂಘಸಂಸ್ಥೆಗಳ ನೆರವು ಜನರು ಸಬಲರಾದರೆ ಕೋವಿಡ್‌ನಂಥ ಸಂಕಟಗಳನ್ನು ನಗರವಾಸಿಗಳಿಗಿಂತ ಚೆನ್ನಾಗಿ ನಿಭಾಯಿಸಲು ಸಮರ್ಥರಾಗುತ್ತಾರೆ. ಕಷ್ಟಗಳನ್ನು ಎದುರಿಸುವ ಸಾಮರ್ಥ್ಯ ಇಂಥ ಸಂದರ್ಭಗಳಲ್ಲೇ ವ್ಯಕ್ತವಾಗುತ್ತದೆ. ಜನರಿಗೆ ಅವರವರ ದುಡಿಮೆಗೆ ತಕ್ಕುದಾದ ಪ್ರತಿಫಲಗಳನ್ನು ಶೀಘ್ರ ದೊರಕಿಸುವಲ್ಲಿ ಡಿಜಿಟಲ್ ತಂತ್ರಜ್ಞಾನದ ಅರಿವೂ ನೆರವಿಗೆ ಬರುತ್ತದೆ.

## ಸಂಪರ್ಕಕ್ಕೆ

ಪೂರ್ಣಿಮಾ ಉಪಾಧ್ಯಾಯ. khojmelghat@gmail.com
07223-277292/9890359154/9422917732

ರಾಮಲಾಲ್. gramsabhapayvihir@gmail.com
7774877304

ಚಿತ್ರ: ಆರ್. ಇಳಂಗೋ



ಚಿತ್ರ: ಆಶೀಶ್ ಕೊಠಾರಿ



(ಎಡಕ್ಕೆ) ಕುತ್ತಂಬಾಕ್ಕಮ್ ಊರೊಟ್ಟಿನ ಸಭೆ (ಬಲಗಡೆ) ಸಮತುವಪುರಂ ಮನೆ ಮತ್ತು ಅಂಗಡಿ, ಕುತ್ತಂಬಾಕ್ಕಮ್, ತಮಿಳುನಾಡು

# ತಮಿಳುನಾಡಿನ ಕುತ್ತಂಬಾಕ್ಕಮ್‌ನಲ್ಲಿ ಆರ್ಥಿಕ ಪುನಶ್ಚೇತನ

ಚೆನ್ನೈ ನಗರದ ಹೊರವಲಯದಲ್ಲಿರುವ ಒಂದು ಸಾಮಾನ್ಯ ಹಳ್ಳಿ ಕುತ್ತಂಬಾಕ್ಕಮ್. ಅಲ್ಲಿ ಏಳು ಹಾಡಿಗಳಿವೆ. ೧೯೯೦ರವರೆಗೂ ಆ ಹಾಡಿಗಳಿಗೆ ರಸ್ತೆಯೂ ಇರಲಿಲ್ಲ, ಬೇರಾವ ಸೌಲಭ್ಯಗಳೂ ಇರಲಿಲ್ಲ. ಬದುಕು ಅಭದ್ರವಾಗಿತ್ತು. ಜಾತಿ ವೈಷಮ್ಯ, ಗೃಹಕಲಹ, ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಎಲ್ಲವೂ ಅಲ್ಲಿಂದ ಆಗಾಗ ವರದಿಯಾಗುತ್ತಿದ್ದವು. ಕಳ್ಳಬಟ್ಟಿ ಮತ್ತು ಕಾಳಸಂತೆಗಳ ಪ್ರಮುಖ ಕೇಂದ್ರವೇ ಅದಾಗಿತ್ತು.

ಇಂಥ ಪರಿಸರದಲ್ಲೇ ೧೯೯೬ರಲ್ಲಿ ಇಲಾಂಗೊ ರಂಗಸಾಮಿ ಎಂಬ ಯುವಕ ನಗರದ ಉದ್ಯೋಗವನ್ನು ಬಿಟ್ಟು ಊರಿಗೆ ಮರಳಿ ಬಂದು ಪಂಚಾಯತ್ ಚುನಾವಣೆಯನ್ನು ಗೆದ್ದು ಗ್ರಾಮದ ಸ್ಥಿತಿಯನ್ನು ಬದಲಿಸಲು ಪಣ ತೊಟ್ಟಿದ್ದು. ಅವರು ಆ ಊರಿನ ಸ್ಥಳೀಯರನ್ನು ಸಂಘಟಿಸಿ ಊರಿನ ಉನ್ನತಿಗೆ ಗ್ರಾಮಮಟ್ಟದ ಯೋಜನೆಯನ್ನು ರೂಪಿಸಿದರು. ಅವರ ಮೊದಲ ಆದ್ಯತೆ ಏನಿತ್ತೆಂದರೆ ಕಳ್ಳಬಟ್ಟಿಯ ಹಾವಳಿ, ಮಹಿಳೆಯ ಮೇಲಿನ್ಯ ದೌರ್ಜನ್ಯವನ್ನು ಮತ್ತು ಜಾತಿಸಂಘರ್ಷ ಇವುಗಳನ್ನು ತಗ್ಗಿಸುವುದಾಗಿತ್ತು. ಜೊತೆಗೆ ಎಲ್ಲರಿಗೂ ವಾಸಕ್ಕೆ ಸುಧಾರಿತ ಮನೆ, ಸ್ವಸಹಾಯ ಸಂಘಗಳ ಸಂಖ್ಯೆಯಲ್ಲಿ ಹೆಚ್ಚಳ, ಪಂಚಾಯತ್ ನೆರವಿನಿಂದ ಉದ್ಯೋಗಾವಕಾಶ ನಿರ್ಮಾಣ, ಸ್ಥಳೀಯ ಸಂಪನ್ಮೂಲಗಳನ್ನೇ ಆಧರಿಸಿದ ಜೀವನೋಪಾಯಗಳ ಶೋಧ ಮತ್ತು ತತ್ವಾರಗಳ ನೆರಳನ್ನು ಬಿಟ್ಟು ಸಮೃದ್ಧಿಯತ್ತ ಗ್ರಾಮೀಣ ಆರ್ಥಿಕತೆಯನ್ನು ಕೊಂಡೊಯ್ಯುವುದು ಆಗಿತ್ತು. ಚಿಕ್ಕ ಉದ್ಯಮ ಘಟಕಗಳನ್ನು ಸ್ಥಾಪಿಸಿ ೧೫೦ ಕುಟುಂಬಗಳಿಗೆ ಉದ್ಯೋಗ ಸಿಗುವಂತೆ ಮಾಡಿದ್ದು ಇಲಾಂಗೊ ರಂಗಸಾಮಿಯ ಮೊದಲ ಸಾಧನೆ. ರಾಜ್ಯ ಸರಕಾರದ ಆವಾಸ (ಸಮತಾಪುರಂ) ಯೋಜನೆಯ ಅಡಿಯಲ್ಲಿ ಸಾಲುಮನೆಗಳನ್ನು ಕಟ್ಟಿಸಿ, ಅಲ್ಲಿ ವಿವಿಧ ಜಾತಿಯ ಜನರು ಒಬ್ಬರ ಪಕ್ಕ ಒಬ್ಬರು ವಾಸಿಸುವಂತೆ ಅನೇಕ ಡಝನ್ ಕುಟುಂಬಗಳ ಮನವೊಲಿಸಿದ್ದು ಮಹತ್ವದ ಸಾಧನೆ. ಅವರು ಕೈಗೊಂಡ ಆರ್ಥಿಕ ಪುನಶ್ಚೇತನ ಕಾರ್ಯಕ್ರಮಗಳ ಫಲವಾಗಿ ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಹೋಗುವುದು ತಪ್ಪಿತು. ನಗರದಲ್ಲಿ ಎಂಜಿನಿಯರ್ ಮತ್ತು ಸಂಶೋಧಕರಾಗಿದ್ದ ಇಲಾಂಗೊ ತಮ್ಮೂರಿಗೆ ಅಲ್ಪವೆಚ್ಚದ ಸೌರಫಲಕದಂತಹ ಶಕ್ತಿ

**ಬಿಕ್ಕಟ್ಟು:** ಗುಳೆ ತಡೆಗಟ್ಟಬಲ್ಲ ಗ್ರಾಮೀಣ ಜೀವನೋಪಾಯಕ್ಕೆ

**ಪರಿಹಾರ:** ಸಣ್ಣ-ಪ್ರಮಾಣದ, ಲೇಬರ್-ಇಂಟೆನ್ಸಿವ್ ಮ್ಯಾನ್ಯುಫ್ಯಾಕ್ಚರಿಂಗ್ ಮತ್ತು ಕ್ರಾಫ್ಟ್ಸ್



ಉಳಿತಾಯದ ವಿಧಾನಗಳನ್ನು ಪರಿಚಯಿಸಿದರು. ತಮಿಳುನಾಡಿನ ಗ್ರಾಮಗಳ ಸುಧಾರಣೆಗೆ ಅಗತ್ಯವಿದ್ದ ವಿಧಾನಗಳ ಬಗ್ಗೆ ಪಂಚಾಯತ್ ಮುಖ್ಯಸ್ಥರಿಗೆ ತರಬೇತಿ ನೀಡಲೆಂದು ಅವರು ತನ್ನ ಊರಲ್ಲಿ 'ಪಂಚಾಯತ್ ಅಕಾಡೆಮಿ'ಯನ್ನು ಆರಂಭಿಸಿ ೧೯೦ ಗ್ರಾಮಗಳ ಸದಸ್ಯತ್ವ ಪಡೆದರು. ಊರಿನ ಅಭಿವೃದ್ಧಿಯಲ್ಲಿ ಜನಸಾಮಾನ್ಯರು ಪಾಲ್ಗೊಳ್ಳುವುದು ಅಗತ್ಯವೆಂಬುದನ್ನು ಒತ್ತಿ ಹೇಳುತ್ತ ಹಂತಹಂತವಾಗಿ ಜಾಸ್ತಿ ಜಾಸ್ತಿ ಜನರನ್ನು ತೊಡಗಿಸುತ್ತ ಹೋದರು. 'ಪ್ರತಿಯೊಂದು ಕುಟುಂಬವೂ ಸ್ವಾವಲಂಬಿಯಾಗುವಂತೆ ಪ್ರತಿಯೊಬ್ಬರ ಸಾಮರ್ಥ್ಯಕ್ಕೆ ತಕ್ಕಂತೆ ಕೌಶಲ ಅಭಿವೃದ್ಧಿಯ ಅವಕಾಶಗಳನ್ನು ಸೃಷ್ಟಿಸುತ್ತ ಹೋದೆವು. ಮೊದಮೊದಲು ಹಾಡಿಯ ಎಲ್ಲರ ಕೈಗೂ ಕೆಲಸ ಸಿಗುವಂಥ ಯೋಜನೆಗಳನ್ನು ಪ್ರಾರಂಭಿಸಿ, ಕ್ರಮೇಣ ಇಡೀ ಊರಿಗೆ ಉದ್ಯೋಗಾವಕಾಶ ಲಭಿಸುವಂತೆ ಮಾಡಿದೆವು. ಇಂಥ ಹಳ್ಳಿಗಳ ಜಾಲವನ್ನು ಸೇರಿಸಿ ಅದನ್ನು ಸ್ವಾವಲಂಬಿ ಆರ್ಥಿಕ ವಲಯ'ವನ್ನಾಗಿ ಮಾಡಬಹುದು ಎನ್ನುತ್ತಾರೆ ಇಲಾಂಗೊ. ಕೋವಿಡ್ ಸಂಕಟಸಮಯದಲ್ಲಿ ಇಲಾಂಗೊ ತಮ್ಮ ಹಳ್ಳಿಯಲ್ಲೇ ಸೌರಶಕ್ತಿಯನ್ನು ಬಳಸಿ ಸೋಂಕುನಿವಾರಕ ದ್ರವಗಳನ್ನು ತಯಾರಿಸುವ ಘಟಕವನ್ನು ಆರಂಭಿಸಿದರು. ಇಂಥ ಪುಟ್ಟ ಘಟಕಗಳನ್ನು ಎಲ್ಲಿ ಬೇಕಾದರೂ ಆರಂಭಿಸಬಹುದು ಮತ್ತು ಆಯಾ ಹಳ್ಳಿಯ ಸಂಪೂರ್ಣ ಸ್ವಚ್ಛತೆಗೆ ನೆರವಾಗಬಹುದು.

## ಪಾಠಗಳು:

ಸಾಬೂನು, ಕೆಚಪ್, ಸೋಂಕುನಿವಾರಕ ದ್ರವ ಮುಂತಾದವುಗಳ ಉತ್ಪಾದನೆಗೆ ಬೇಕಾದ ಪುಟ್ಟ ಘಟಕಗಳನ್ನು ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಆರಂಭಿಸಿ ಸ್ಥಳೀಯರಿಗೆ ಜೀವನೋಪಾಯ ಕಲ್ಪಿಸಬಹುದು. ಅದೇವೇಳೆಗೆ ಜಾತಿ ಪದ್ಧತಿಯ ನಿರ್ಮೂಲನಕ್ಕೂ ಯತ್ನಿಸುವುದು ಮುಖ್ಯ. ಇಂಥ ಆರ್ಥಿಕ ಮತ್ತು ಸಾಮಾಜಿಕ ನವಮಾರ್ಗಗಳ ಮೂಲಕ ಹಳ್ಳಿಯವರು ಹಳ್ಳಿಯಲ್ಲೇ ಉಳಿದು, ಆತ್ಮಗೌರವದ ಬದುಕನ್ನು ಕಟ್ಟಿಕೊಳ್ಳಬಹುದು, ಗುಳೆಯನ್ನೂ ತಡೆಗಟ್ಟಬಹುದು.

## ಸಂಪರ್ಕಕ್ಕೆ

ಇಲಾಂಗೊ ಆರ್. panchayatgovt@gmail.com, 9940682201

ಇಲಾಂಗೊ ಜೊತೆಗಿನ ಸಂವಾದಕ್ಕೆ ಈ ಕೊಂಡಿಯನ್ನು ನೋಡಬಹುದು:
https://vscoronatimes.blogspot.com/2020/05/vikalp-varta-4-innovation-and.html

ಚಿತ್ರ ಕೃಪೆ: ವಿಶೇಷ ವ್ಯವಸ್ಥೆ (ದಿ ಹಿಂದು)



ಚಿತ್ರ: ಆಶೀಶ್ ಕೊಠಾರಿ



(ಎಡಕ್ಕೆ) ಕೋವಿಡ್ ಸಂಕಟಸಮಯದಲ್ಲಿ ಇಲಾಂಗೊ ರೂಪಿಸಿದ ಹಳ್ಳಿಗಳಲ್ಲೇ ಸೌರಶಕ್ತಿಯಿಂದ ಸೋಂಕುನಿವಾರಕ ದ್ರವದ ಉತ್ಪಾದನಾ ಘಟಕ (ಬಲಕ್ಕೆ) ಕುತ್ತಂಬಾಕ್ಕಮ್‌ನಲ್ಲಿ ಉತ್ಪಾದನಾ ಘಟಕ. (ಚಿತ್ರಕೃಪೆ: ದಿ ಹಿಂದೂ)

**ಬಿಕ್ಕಟ್ಟು:** ಗುಳೆ ತಡೆಗಟ್ಟಬಲ್ಲ ಗ್ರಾಮೀಣ ಜೀವನೋಪಾಯಕ್ಕೆ

**ಪರಿಹಾರ:** ಸಣ್ಣ-ಪ್ರಮಾಣದ, ಲೇಬರ್-ಇಂಟೆನ್ಸಿವ್ ಮ್ಯಾನ್ಯುಫ್ಯಾಕ್ಚರಿಂಗ್ ಮತ್ತು ಕ್ರಾಫ್ಟ್ಸ್



ಚಿತ್ರ: ಆಶೀಶ್ ಕೊಠಾರಿ







(ಎಡಕ್ಕೆ) ಕಚ್ಛದ ಪ್ರಧಾನ ನೇಕಾರ ಶ್ಯಾಮ್‌ಜೀ ವಿಶ್ರಾಮ್ ಸಿಜು ಮತ್ತು ಅವರ ಜೊತೆ ಕೈಮಗ್ಗದ ಯುವ ನೇಕಾರ ದಮಾಭಾಯಿ ಮಾರ್ವಾಡ; (ಮಧ್ಯೆ) ಪರಂಪರಾಗತ ನೇಯ್ಗೆ ಕಲೆಗೆ ಆಧುನಿಕ ಆಯಾಮ ಕೊಡುತ್ತಿರುವ ಕಚ್ಛದ ಪ್ರಕಾಶ್ ನಾರಾನ್‌ಭಾಯಿ ವಂಕಾರ್; (ಬಲಕ್ಕೆ) ಜಮ್ತಾದಾ ಗ್ರಾಮದಲ್ಲಿ ನೇಕಾರಿಕೆಗೆ ಕೈಜೋಡಿಸುತ್ತಿರುವ ಅನೇಕ ಯುವ ಮಹಿಳೆಯರ ಪೈಕಿ ಶೀತಲ್ ಹಿತೇಶ್‌ಭಾಯಿ.

# ಗುಜರಾತಿನ ಕಚ್ಛದಲ್ಲಿ ಕೈಮಗ್ಗಕ್ಕೆ ಪುನಶ್ಚೇತನ

ದೇಶದ ಬಹುತೇಕ ಎಲ್ಲ ಕಡೆ ಆದಂತೆ, ಕಚ್ಛದಲ್ಲೂ ಕೈಮಗ್ಗದ ಕಲೆ ಮತ್ತು ವ್ಯಾಪಾರ ಕಳೆದ ಎರಡು ದಶಕಗಳಿಂದ ತೀವ್ರ ಕುಸಿತದ ಸ್ಥಿತಿಯಲ್ಲಿದೆ. ಒಂದೆಡೆ ಕಾರ್ಖಾನೆಗಳಿಂದ ಅಗ್ಗದ ವಸ್ತುಗಳ ಉತ್ಪಾದನೆ, ಇನ್ನೊಂದೆಡೆ ೧೯೯೦-೨೦೦೦ದ ದಶಕದಲ್ಲಿ ಎದುರಾದ ನೈಸರ್ಗಿಕ ವಿಕೋಪಗಳಿಂದಾಗಿ ಕೈಮಗ್ಗ ಉದ್ಯಮ ಕೊನೆಯುಸಿರಿನ ಹಂತಕ್ಕೆ ಬಂದಿದೆ. ದುರಂತದತ್ತ ಸಾಗುತ್ತಿರುವ ಕಚ್ಛ ಪ್ರಾಂತದ ಆರ್ಥಿಕ ಸ್ಥಿತಿಯನ್ನು ಹೇಗಾದರೂ ಕೈಮಗ್ಗದ ಕುಶಲಕಲೆಯ ಮೂಲಕವೇ ಮೇಲೆತ್ತಬೇಕೆಂದು ಕೆಲವು ಉತ್ಸಾಹಿ ನೇಕಾರರನ್ನು ಸೇರಿಸಿಕೊಂಡು ಖಮೀರ್ ಎಂಬ ಸ್ವಯಂಸೇವಾ ಸಂಸ್ಥೆ ಟೊಂಕ ಕಟ್ಟಿತು. ಸ್ಥಳೀಯವಾಗಿ ಬೆಳೆಯುವ ಕಪ್ಪು ಹತ್ತಿಯಿಂದ (ಕಾಲಾ ಕಾಟನ್) ಹಿಡಿದು ನೂಲು, ಬಟ್ಟೆಯವರೆಗಿನ ಎಲ್ಲ ಹಂತಗಳಿಗೂ ಚೈತನ್ಯ ತುಂಬಿದರು. ಮಾರುಕಟ್ಟೆಯಲ್ಲಿ ಆಕರ್ಷಕವಾಗಿ ಕಾಣುವಂಥ ಹೊಸಬಗೆಯ ವಸ್ತುಗಳನ್ನು ನೇಯಲು ಕುಶಲಕರ್ಮಿಗಳಿಗೆ ತರಬೇತಿ ಕೊಟ್ಟರು. ಕೆಲವೇ ವರ್ಷಗಳಲ್ಲಿ ನೇಕಾರಿಕೆ ಕಲೆಗೆ ಮರುಜೀವ ಬಂತು. ಈಗ ಅದು ದೇಶಾದ್ಯಂತ, ಅಷ್ಟೇಕೆ ಹೊರದೇಶಗಳಲ್ಲೂ ಪರಿಚಿತವಾಗಿದೆ.

ಇದರ ಪರಿಣಾಮವಾಗಿ ಎಲ್ಲ ರಂಗಗಳಲ್ಲೂ, ವಿಶೇಷವಾಗಿ ಆರ್ಥಿಕವಾಗಿ ಸುಧಾರಣೆ ಕಂಡುಬಂದಿದೆ. ಎಲ್ಲಕ್ಕಿಂತ ಮುಖ್ಯ ಏನೆಂದರೆ, ಯುವಕರಿಗೆ ತಮ್ಮೂರೇ ಇಷ್ಟವಾಗುತ್ತಿದೆ. ನಗರಕ್ಕೆ ಅಥವಾ ಅರಬ್ ದೇಶಕ್ಕೆ ಉದ್ಯೋಗಕ್ಕೆ ಹೋದವರಿಗೂ ಮರಳಿ ತಮ್ಮೂರಲ್ಲೇ ನೆಲೆಯೂರಬೇಕೆಂಬ ಕನಸು ಕಾಣುವಂತಾಗಿದೆ. ಇಲ್ಲಿ ಈಗ ಹಣಗಳಿಕೆಯ ಜೊತೆಜೊತೆಗೇ ಸೃಜನಶೀಲ ಕೆಲಸಗಳಲ್ಲಿ ತೊಡಗಬಹುದು, ತನಗೆ ತಾನೇ ಯಜಮಾನನಾಗಿರಬಹುದು, ಹಳೆಯ ಪರಂಪರೆಯನ್ನು ಜೀವಂತ ಇಡಬಹುದು ಅನ್ನಿಸತೊಡಗಿದೆ. ಇಲ್ಲಿನ ಜನರಲ್ಲಿ ವಂಶಪಾರಂಪರ್ಯ ಬಂದ ಕೈಮಗ್ಗದ ಕೌಶಲದ ಜೊತೆಗೆ ಕ್ರಮೇಣ ಸೃಜನಾತ್ಮಕ ಪ್ರಯೋಗಶೀಲತೆ, ಹಳತರೊಂದಿಗೆ ಹೊಸದನ್ನು ಸೇರಿಸುವ ಕಲಿಕಾ ಪ್ರವೃತ್ತಿಗಳು ವಿಕಾಸವಾಗತೊಡಗಿವೆ.

**ಬಿಕ್ಕಟ್ಟು:** ಗುಳೆ ತಡೆಗಟ್ಟಬಲ್ಲ ಗ್ರಾಮೀಣ ಜೀವನೋಪಾಯಕ್ಕೆ

**ಪರಿಹಾರ:** ಸಣ್ಣ-ಪ್ರಮಾಣದ, ಲೇಬರ್-ಇಂಟೆನ್ಸಿವ್ ಮ್ಯಾನ್ಯುಫ್ಯಾಕ್ಚರಿಂಗ್ ಮತ್ತು ಕ್ರಾಫ್ಟ್ಸ್



ಇದಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಪರಿವರ್ತನೆಯೂ ಆಗತೊಡಗಿದೆ. ತೀರ ಕೆಳಜಾತಿಯವರೆನಿಸಿದವರೊಂದಿಗೆ ಆತ್ಮೀಯ ನಡವಳಿಕೆ, ಮಹಿಳೆಯರಿಗೆ ಹೆಚ್ಚುಹೆಚ್ಚಿನ ಜವಾಬ್ದಾರಿ ನೀಡುವ ಮನೋವೃತ್ತಿ, ಹಿರಿಯರನ್ನು ಗೌರವಿಸುತ್ತಲೇ ತಮ್ಮ ಸ್ವಂತಿಕೆಯನ್ನೂ ಪ್ರದರ್ಶಿಸಬೇಕೆಂಬ ಯುವಮನಸ್ಸು ಎಲ್ಲೆಲ್ಲೂ ಕಾಣತೊಡಗಿದೆ.

ಆದರೂ ಒಂದು ಸಮಸ್ಯೆ ಎದುರಾಗಿದೆ. ಹಿಂದೆಲ್ಲ ಇಲ್ಲಿನ ನೇಯ್ಗೆಗಳೆಲ್ಲ ಸ್ಥಳೀಯ ವಿನಿಮಯಕ್ಕಷ್ಟೇ ಸೀಮಿತವಾಗಿದ್ದವು. ಈಗ ದೇಶ-ವಿದೇಶಗಳ ಬೇಡಿಕೆಗೆ ತಕ್ಕಂತೆ ಉತ್ಪಾದನೆ ಜಾಸ್ತಿಯಾಗಿದೆ. ಕೋವಿಡ್ ಸಂಕಟ ಬಂದಾಗಿನಿಂದ ಬೇಡಿಕೆ ಕುಸಿದಿದೆ. ಮಗ್ಗಗಳಲ್ಲಿ ಉದ್ಯೋಗ ಕೊಟ್ಟವರಿಗಿಂತ ದುಡಿಯುತ್ತಿದ್ದವರಿಗೆ ಕೆಲಸವಿಲ್ಲದ್ದರಿಂದ ಹೆಚ್ಚಿನ ತೊಂದರೆಯಾಗಿದೆ. ಹೇಗೋ, ಹಿಂದೆಯೂ ಅನೇಕ ಸಮಸ್ಯೆಗಳಿಂದ ಉಪಾಯವಾಗಿ ಪಾರಾಗಿ ಬಂದಂತೆ ಇದನ್ನೂ ನಿಭಾಯಿಸಬಹುದೆಂಬ ಆತ್ಮವಿಶ್ವಾಸ ಅಲ್ಲಿನ ನೇಕಾರ ಸಮುದಾಯಕ್ಕೆ ಬಂದಿದೆ.

## ಪಾಠಗಳು

ಹೊಸತಿಗೆ ತೆರೆದ ಮನ ಹಾಗೂ ಸೂಕ್ತ ಬಂಡವಾಳದ ಹೂಡಿಕೆಯಾದರೆ ಸಾಂಪ್ರದಾಯಿಕ ಕುಶಲಕಲೆಗಳ ಮೌಲ್ಯವರ್ಧನೆ ಮತ್ತು ಗೌರವಯುತ ಬದುಕು ಸಾಧ್ಯವಿದೆ. ಯುವಕರು ತಾವಿದ್ದಲ್ಲೇ ಬದುಕನ್ನು ಕಟ್ಟಿಕೊಳ್ಳಬಹುದು, ವಲಸೆ ಹೋಗಿದ್ದವರೂ ಊರಿಗೆ ಹಿಂದಿರುಗಬಹುದು. ಊರಿನ ಪರಂಪರಾಗತ ಜ್ಞಾನಕೌಶಲ, ಸೃಜನಶೀಲತೆ, ನವೋತ್ಸಾಹ ಇದ್ದರೆ ಹೊಸ ವಿನ್ಯಾಸದ ನವೀನ ಉತ್ಪನ್ನಗಳನ್ನು ಸೃಷ್ಟಿಸಿ ಮಾರುಕಟ್ಟೆಯನ್ನು ಶೋಧಿಸಿಕೊಳ್ಳುತ್ತಲೇ ಊರಿನ ಅಸಮಾನತೆ, ಜಾತಿವೈಷಮ್ಯಗಳನ್ನೂ ತೊಡೆದು ಹಾಕಿ ಬೆಳೆಯಬಹುದು. ಇಂಥ ಯತ್ನದಿಂದ ಆರ್ಥಿಕ ಉನ್ನತಿಯ ಜೊತೆಜೊತೆಗೇ ಗೌರವಯುತ ಜೀವನೋಪಾಯಗಳನ್ನೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮೃದ್ಧಿಯನ್ನೂ ಸಾಧಿಸಬಹುದು.

## ಸಂಪರ್ಕಕ್ಕೆ

ಘಟಿತ್ ಲಹೇರು ghatit.laheru@khamir.org, 9979450131

ಯುವ ನೇಕಾರರು ಕೋವಿಡ್ ಸಂಕಟಸಮಯವನ್ನು ಹೇಗೆ ನಿಭಾಯಿಸುತ್ತಾರೆ ಎಂಬುದಕ್ಕೆ ಕೆಳಗಿನ ಕೊಂಡಿಯನ್ನು ನೋಡಿ:
https://vscoronatimes.blogspot.com/2020/04/vikalp-varta-2-youth-weave-new-story-in.html

# ಗುಳೆ ತಡೆಗಟ್ಟಬಲ್ಲ ಗ್ರಾಮೀಣ ಜೀವನೋಪಾಯಕ್ಕೆ ಶಿಫಾರಸುಗಳು

- ರೈತರು, ಆದಿವಾಸಿಗಳು, ಮೀನುಗಾರರು, ಗೌಳಿಗರು ಮತ್ತು ಕುಶಲಕರ್ಮಿಗಳಿಗೆ ಆದ್ಯತೆ ಕೊಟ್ಟು ಸ್ಥಳೀಯ ಮಟ್ಟದಲ್ಲಿ ಉದ್ಯೋಗ ಸೃಷ್ಟಿ ಮತ್ತು ಮಾರುಕಟ್ಟೆಯ ಅವಕಾಶವನ್ನು ಸೃಷ್ಟಿಸಬೇಕು.
- ಸ್ಥಳೀಯ ಸಂಪನ್ಮೂಲಗಳ ಸುಸ್ಥಿರ ಬಳಕೆಯ ಜೊತೆಗೆ ನಿಸರ್ಗ ಸಂವರ್ಧನೆಯನ್ನು ಪ್ರೋತ್ಸಾಹಿಸಬೇಕು.
- ಗ್ರಾಮಸಭೆ, ಮೊಹಲ್ಲಾಸಭೆ ಮತ್ತಿತರ ಬೇರುಮಟ್ಟದ ಪ್ರಜಾತಂತ್ರವನ್ನು ಆಧರಿಸಿ ಸ್ವಾವಲಂಬನೆ ಮತ್ತು ಸ್ವಯಮಾಡಳಿತದ ಮೂಲಕ ಜನರ ಸಬಲೀಕರಣವನ್ನು ಸಾಧಿಸಬೇಕು. ಮಹಿಳೆಯರಿಗೆ ಮತ್ತು ದುರ್ಬಲರಿಗೆ ಹೆಚ್ಚಿನ ಆದ್ಯತೆ ನೀಡಬೇಕು.
- ಒಂದು ಗ್ರಾಮನಿಧಿಯನ್ನು ಸ್ಥಾಪಿಸಬೇಕು. ಅದು ಊರೊಟ್ಟಿನ ಒಳ್ಳೆಯದಕ್ಕೇ ಬಳಕೆಯಾಗಬೇಕು, ಲೆಕ್ಕಪತ್ರ ಪಾರದರ್ಶಕವಾಗಿರಬೇಕು ಮತ್ತು ನಿಧಿಯ ಬಳಕೆಯ ಹಕ್ಕು ಆಗಾಗ ಕೈಯಿಂದ ಕೈಗೆ ಬದಲಾಗುತ್ತಿರಬೇಕು.
- ವಿವಿಧ ಕಾರ್ಯಸೂಚಿಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸ್ಥಳೀಯ ಜನರನ್ನು, ಮುಂದಾಳುಗಳನ್ನು, ಕೆಲಸಗಾರರನ್ನೇ ಆದ್ಯತೆಯ ಮೇರೆಗೆ ತೊಡಗಿಸಬೇಕು.
- ಈಗಿರುವ ಅರಣ್ಯ ಹಕ್ಕು ಕಾಯಿದೆ, ಪಂಚಾಯತ್ ರಾಜ್ ಕಾನೂನು, ನರೇಗಾ, ಅನುಸೂಚಿತ ಜಾತಿಗಳಿಗೆ ಸಂಬಂಧಿಸಿದ ಪಂಚಾಯತ್ ರಾಜ್ ವಿಸ್ತರಣೆಯ ಕಾನೂನುಗಳ ಅಡಿಯಲ್ಲಿ ಊರಿನ ನಿಸರ್ಗ ಸಂಪನ್ಮೂಲಗಳ ದೀರ್ಘಾವಧಿ ಸದ್ಬಳಕೆಗೆ ಪೂರಕವಾಗುವಂತೆ ಹಾಗೂ ಊರವರ ಸ್ವಾವಲಂಬನೆ ಮತ್ತು ಸ್ವಯಮಾಡಳಿತಕ್ಕೆ ಅವಕಾಶ ಮಾಡಿಕೊಡಬಲ್ಲ ಕಾರ್ಯಸೂಚಿಗಳನ್ನು ಸಿದ್ಧಪಡಿಸಬೇಕು.
- ಈಗಿರುವ ಅರಣ್ಯ ಹಕ್ಕು ಕಾಯಿದೆ, ಪಂಚಾಯತ್ ರಾಜ್ ಕಾನೂನು, ನರೇಗಾ, ಅನುಸೂಚಿತ ಜಾತಿಗಳಿಗೆ ಸಂಬಂಧಿಸಿದ ಪಂಚಾಯತ್ ರಾಜ್ ವಿಸ್ತರಣೆಯ ಕಾನೂನುಗಳ ಅಡಿಯಲ್ಲಿ ಊರಿನ ನಿಸರ್ಗ ಸಂಪನ್ಮೂಲಗಳ ದೀರ್ಘಾವಧಿ ಸದ್ಬಳಕೆಗೆ ಪೂರಕವಾಗುವಂತೆ ಹಾಗೂ ಊರವರ ಸ್ವಾವಲಂಬನೆ ಮತ್ತು ಸ್ವಯಮಾಡಳಿತಕ್ಕೆ ಅವಕಾಶ ಮಾಡಿಕೊಡಬಲ್ಲ ಕಾರ್ಯಸೂಚಿಗಳನ್ನು ಸಿದ್ಧಪಡಿಸಬೇಕು.
- ಊರಿನವರ ಅಗತ್ಯಗಳಿಗಾಗಿ ದೂರದ ಮಾರುಕಟ್ಟೆಯನ್ನೇ ನೆಚ್ಚಿಕೊಂಡ ಈಗಿರುವ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಕ್ರಮೇಣ ಕೈಬಿಡಬೇಕು.
- ದೊಡ್ಡ ಉದ್ಯಮಗಳಿಗೆ ಲಾಭ ತರಬಲ್ಲ ಯೋಜನೆಗಳನ್ನು ಕೈಬಿಡಿ. ಸ್ಥಳೀಯ ಉತ್ಪಾದನೆ ಮತ್ತು ಸೇವೆಗಳನ್ನು ಹೆಚ್ಚಿಸಬಲ್ಲ ಅಥವಾ ಪರಸ್ಪರ ವಿನಿಮಯದ ಮೂಲಕ ಊರಿನ ಆದಷ್ಟೂ ಹೆಚ್ಚಿನ ಜನರಿಗೆ ಅನುಕೂಲವಾಗಬಲ್ಲ, ವಿಕೇಂದ್ರೀಕೃತ ಪದ್ಧತಿಯಲ್ಲಿ ತಯಾರಿಸಲು/ವಿತರಿಸಲು ಸಾಧ್ಯವಾಗಬಲ್ಲ ಉತ್ಪನ್ನಗಳಿಗೆ ಪ್ರೋತ್ಸಾಹ ನೀಡಿ.
- ಯಾಂತ್ರೀಕೃತ ಉತ್ಪನ್ನಗಳನ್ನು ಕೈಬಿಟ್ಟು ದುಡಿಯುವ ಕೈಗಳಿಗೆ ಕೆಲಸ ಕೊಡಬಲ್ಲ ಉತ್ಪಾದನಾ ವಿಧಾನಗಳಿಗೇ ಪ್ರೋತ್ಸಾಹ ನೀಡಿ.
- ಜನರ ಮೂಲ ಹಕ್ಕುಗಳಿಗೆ ಹಾಗೂ ಊರೊಟ್ಟಿನ ಪರಿಸರ ಮತ್ತು ನೈಸರ್ಗಿಕ ಸಂಪತ್ತುಗಳಿಗೆ ಧಕ್ಕೆಯಾಗುವಂತೆ ಈಗಿರುವ ಕಾನೂನುಗಳನ್ನು ದುರ್ಬಲಗೊಳಿಸುವ, ತಿಳಿಗೊಳಿಸುವ ಅಥವಾ ಪಕ್ಕಕ್ಕೆ ಜರುಗಿಸುವ ಪ್ರಯತ್ನಗಳನ್ನು ನಿಲ್ಲಿಸಿ.
- ಕರಕುಶಲ ವಸ್ತುಗಳ ಮೇಲೆ ಅಥವಾ ವಿಧಾನಗಳ ಮೇಲೆ ಜಿಎಸ್‌ಟಿಯಂಥ ತೆರಿಗೆ, ಸುಂಕ ಇತ್ಯಾದಿಗಳನ್ನು ಹೇರದಂತೆ ನೋಡಿಕೊಳ್ಳಿ. ನೆಲದ, ನೀರಿನ ಅಥವಾ ಕಾಡಿನ ಉತ್ಪನ್ನಗಳಿಗೆ ಮತ್ತು ಕರಕುಶಲ ವಸ್ತುಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಿ. ಇಂಥ ಉತ್ಪನ್ನಗಳನ್ನು ಸರಕಾರಕ್ಕೇ ಕೊಡಬೇಕೆಂಬ ಕಡ್ಡಾಯ ನಿಬಂಧನೆಯಿದ್ದರೆ ಅದನ್ನು ಕಳಚಿ ಹಾಕಿ.

**ಸಮಸ್ಯೆ**: ಆರೋಗ್ಯ ಬಿಕ್ಕಟ್ಟುಗಳೊಂದಿಗೆ ವ್ಯವಹರಿಸಲು ಸಾಧ್ಯವಾಗದ ಸಮುದಾಯಗಳು

**ಪರಿಹಾರ** : ಸಮುದಾಯ ಆರೋಗ್ಯ ಸುಧಾರಣೆ



(ಚಿತ್ರಕೃಪೆ: ಕುನರಿಯಾ ಪಂಚಾಯತ)





(ಎಡಕ್ಕೆ) ಕುನರಿಯಾ ಗ್ರಾಮಸಭೆ (ಬಲಕ್ಕೆ) ಗುಜರಾತಿನ ಕಚ್ಛದ ಕುನರಿಯಾ ಗ್ರಾಮದ ಭೂನಕ್ಷೆ ತಯಾರಿಕೆ

# ಗುಜರಾತಿನ ಕಚ್ಛದ ಕುನರಿಯಾ ಗ್ರಾಮದಲ್ಲಿ ಕೋವಿಡ್ ಸಂಕಟಗಳಿಗೆ ಪಂಚಾಯತ್ ಪರಿಹಾರ

ಕಚ್ಛದ ಭುಜ್ ಪಟ್ಟಣದಿಂದ ೨೦ ಕಿಲೊಮೀಟರ್ ದೂರದಲ್ಲಿರುವ ಗ್ರಾಮ ಕುನರಿಯಾ. ಗ್ರಾಮಗಳ ಸ್ವಯಮಾಡಳಿತ ಕುರಿತಂತೆ ಸಂವಿಧಾನದ ೭೩ನೇ ತಿದ್ದುಪಡಿಯನ್ನು ಅದು ಪರಿಣಾಮಕಾರಿಯಾಗಿ ಜಾರಿಗೆ ತರಲು ಕಳೆದ ಕೆಲವು ವರ್ಷಗಳಿಂದ ಮುಂದಡಿ ಇಡುತ್ತಿದೆ. ಅದರ ಈಗಿನ ಸರಪಂಚರಾಗಿರುವ ಸುರೇಶ್ ಛಂಗಾ ೨೦೧೭ರಲ್ಲಿ ಚುನಾಯಿತರಾಗಿದ್ದು ಊರಿನ ಜನರ ಹಾಗೂ ಸರಕಾರಿ ಇಲಾಖೆಗಳ ನಡುವಣ ಕಂದರವನ್ನು ಮುಚ್ಚಲೆಂದು ಅನೇಕ ಕ್ರಮಗಳನ್ನು ಜಾರಿಗೆ ತಂದಿದ್ದಾರೆ. ಅದಕ್ಕೆಂದು ದೊಡ್ಡ ಪ್ರಮಾಣದಲ್ಲಿ ಗ್ರಾಮೀಣ ಜನರ ಸಭೆಗಳನ್ನು ನಡೆಸುತ್ತ, ಸರಕಾರಿ ಯೋಜನೆಗಳನ್ನು ಅವರೊಟ್ಟಿಗೆ ಚರ್ಚಿಸಿ, ಅವರ ಅಭಿಪ್ರಾಯಕ್ಕೆ ತಕ್ಕಂತೆ ಕಾರ್ಯರೂಪಕ್ಕೆ ಬರುವಂತೆ ಮಾಡುತ್ತಿದ್ದಾರೆ. ಜನರ ಜೀವನದ ಮೇಲೆ ನೇರ ಪ್ರಭಾವ ಬೀರುವಂಥ ಯಾವ ಯಾವ ಯೋಜನೆಗಳಿವೆ, ಅವುಗಳ ಸ್ವರೂಪವೇನು, ಅದಕ್ಕೆ ಮಂಜೂರಾದ ಹಣವೆಷ್ಟು ಎಂಬ ಮಾಹಿತಿಗಳನ್ನು ತೆರೆದ ಸಭೆಯಲ್ಲಿ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ವಿವರಿಸುತ್ತಾರೆ. ಜನರಲ್ಲಿ ಜಾಗೃತಿ ಮೂಡಿಸಿ, ಅವರೂ ಸರಕಾರಿ ಯೋಜನೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿ, ಪಾರದರ್ಶಕತೆಯನ್ನು ಸಾಬೀತು ಪಡಿಸುತ್ತಿದ್ದಾರೆ. ಗ್ರಾಮಸಭೆಗಳಲ್ಲಿ ಅದುವರೆಗೆ ಮಹಿಳೆಯರ ಹಾಜರಾತಿಯೇ ಇರುತ್ತಿರಲಿಲ್ಲ. ಈಗ ಅದು ಶೇಕಡಾ ೫೦ಕ್ಕೇರಿದೆ. ನರೇಗಾ ಮತ್ತು ಆಹಾರ ಹಕ್ಕಿನ ಕಾಯಿದೆಗಳು ಕಟ್ಟುನಿಟ್ಟಾಗಿ ಜಾರಿಗೆ ಬರುವಂತೆ ಮಾಡಿದ್ದರಿಂದ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿಯ ಆಶಯಗಳನ್ನು ನೈಜವಾಗಿಸುವ ನಿಚ್ಚಳ ಯತ್ನಗಳು ಅಲ್ಲಿ ಕಾಣುತ್ತಿವೆ.

ಭುಜ್ ಪ್ರಾಂತದ ಇತರ ಪಂಚಾಯತಗಳನ್ನು ಜೋಡಿಸುವ ಕೆಲಸದಲ್ಲೂ ಕುನರಿಯಾ ತೊಡಗಿಕೊಂಡಿದೆ. ಆರೋಗ್ಯ, ಶಿಕ್ಷಣ, ಕೃಷಿ, ಪಶುಸಂಗೋಪನೆ, ಮಹಿಳಾ ಸಬಲೀಕರಣ, ಶುಚಿತ್ವ, ಉದ್ಯೋಗಾವಕಾಶ ನಿರ್ಮಾಣ ಮತ್ತು ಪರಿಸರ ಸಂವರ್ಧನೆಯಂಥ ವಿಷಯಗಳು ಸುಮಾರು ೧೬,೦೦೦ ಜನರನ್ನು ತಲುಪುವಂತೆ ೧೧೫ಕ್ಕೂ ಹೆಚ್ಚು ಸಭೆಗಳನ್ನು ನಡೆಸಲಾಗಿದೆ.

## ಸಮಸ್ಯೆ : ಆರೋಗ್ಯ ಬಿಕ್ಕಟ್ಟುಗಳೊಂದಿಗೆ ವ್ಯವಹರಿಸಲು ಸಾಧ್ಯವಾಗದ ಸಮುದಾಯಗಳು

## ಪರಿಹಾರ : ಸಮುದಾಯ ಆರೋಗ್ಯ ಸುಧಾರಣೆ



ಕೋವಿಡ್ ಸಂಕಟಕಾಲದಲ್ಲಿ ಸಾಮಾಜಿಕ ಮಾಧ್ಯಮಗಳ ಮೂಲಕ ಕೊರೊನಾ ಮಹಾಮಾರಿಯ ಕುರಿತಂತೆ ಸಮಗ್ರ ಮಾಹಿತಿಯನ್ನೂ ಸುರಕ್ಷಾ ಕ್ರಮಗಳನ್ನೂ ತಿಳಿಸಿದ್ದಷ್ಟೇ ಅಲ್ಲ, ಮನೆಮನೆಯನ್ನೂ ತಲುಪುವಂತೆ ಆರೋಗ್ಯ ಸಮೀಕ್ಷೆ ನಡೆಸಲಾಗಿದೆ. ಜೀವನಾವಶ್ಯಕ ವಸ್ತುಗಳ ಪೂರೈಕೆಗೆ ಕೇವಲ ಶಿಫಾರಸು ಮಾಡಿದ ವ್ಯಾಪಾರಿಗಳು/ಉತ್ಪಾದಕರು ಮಾತ್ರ ಹಳ್ಳಿಯನ್ನು ಪ್ರವೇಶಿಸುವಂತೆ ಬಂದೋಬಸ್ತ್ ಮಾಡಲಾಗಿದೆ. ಅನುಕೂಲಸ್ಥ ಕುಟುಂಬಗಳಿಂದ ಮತ್ತು ರೈತರ ನೆರವಿನಿಂದ ಸುಮಾರು ೩೧೬ ದುರ್ಬಲ ಕುಟುಂಬಗಳಿಗೆ, ವಿಶೇಷ ಚೇತನರಿಗೆ, ಮತ್ತು ಒಬ್ಬಂಟಿ ಮಹಿಳೆಯರಿಗೆ ಒಂದು ತಿಂಗಳು ಕಾಲ ಆಹಾರ ಸಾಮಗ್ರಿಗಳನ್ನು, ಅಗತ್ಯ ಔಷಧವಸ್ತುಗಳನ್ನು ಮತ್ತು ಇತರ ತುರ್ತು ಸಾಮಗ್ರಿಗಳನ್ನು ಒದಗಿಸಲಾಯಿತು. ಸ್ಥಳೀಯ ಆಡಳಿತದ ನೆರವಿನಿಂದ ಈ ಸಂಕಟಕಾಲದಲ್ಲೂ ನರೇಗಾ ಕೆಲಸ ಊರಿನವರಿಗೆ ಲಭಿಸುವಂತೆ ಮಾಡಲಾಗಿತ್ತು. ಕೋವಿಡ್ ಕಾಯಿಲೆ ಯಾರಿಗಾದರೂ ತಗಲಿದರೆ ಒಂದು ಪ್ರತ್ಯೇಕ ತುರ್ತು ಶುಶ್ರೂಷಾ ವಾರ್ಡನ್ನು ಕಟ್ಟುವ ನೀಲನಕ್ಷೆಯೂ ಪಂಚಾಯತ್ ತಯಾರಿಸಿಕೊಂಡಿದೆ.

ಲಾಕ್‌ಡೌನ್ ಅವಧಿಯಲ್ಲಿ ಇವರು ಮಾಡಿದ ಒಂದು ಅಪರೂಪದ ಕೆಲಸ ಏನೆಂದರೆ ಮನೆಯಲ್ಲಿ ಕೈಕಟ್ಟಿ ಕೂತಂತಿದ್ದ ಎಳೆಯರಿಗೆ ಹಿರಿಯರಿಂದ ಇ-ಪಾಠ ಮಾಡಿಸಿದ್ದು. ಸಂಗೀತ, ಕುಶಲಕೈಗಾರಿಕೆ, ಅಡುಗೆ ಮತ್ತು ಇತರ ಸಾಂಪ್ರದಾಯಿಕ ಜ್ಞಾನವೆಲ್ಲ ಪಾಠದ ರೂಪದಲ್ಲಿ ಲಭಿಸತೊಡಗಿತು. ಅದು ಹಿರಿಯರಿಗೂ ಇ-ಪಾಠವಾಗಿತ್ತು. ಗೆಳೆಯರೊಂದಿಗೆ ಬೆರೆಯುವ ಅವಕಾಶವಿಲ್ಲದೆ ಮನೆಯಲ್ಲೇ ಕಿಲಾಡಿ ಮಾಡುತ್ತ, ದೊಡ್ಡವರಿಂದ ಬೈಸಿಕೊಳ್ಳುತ್ತ ಓಡಾಡಿಕೊಂಡಿದ್ದ ಮಕ್ಕಳಿಗೆ ರಂಜನೀಯ ಪಾಠ ಮತ್ತು ಡಿಜಿಟಲ್ ಮಾಧ್ಯಮದ ಪರಿಚಯವೂ ಆಯಿತು.

### ಸಂಪರ್ಕಕ್ಕೆ

ಸುರೇಶ್ ಛಂಗ sureshchhanga@gmail.com, 9913055305

(ಚಿತ್ರ ಕೃಪೆ: ಕುನರಿಯಾ ಪಂಚಾಯತ್)





(ಎಡಕ್ಕೆ) ಕೋವಿಡ್ ಕಾಲದಲ್ಲಿ ಮುಖವಾಡಗಳ ವಿತರಣೆಗೆ ಸಿದ್ಧತೆ (ಎಡಕ್ಕೆ) ವಿಕೋಪ ನಿರ್ವಹಣಾ ಸಮಿತಿಯ ಸಭೆ

**ಸಮಸ್ಯೆ :** ಆರೋಗ್ಯ ಬಿಕ್ಕಟ್ಟುಗಳೊಂದಿಗೆ ವ್ಯವಹರಿಸಲು ಸಾಧ್ಯವಾಗದ ಸಮುದಾಯಗಳು

**ಪರಿಹಾರ :** ಸಮುದಾಯ ಆರೋಗ್ಯ ಸುಧಾರಣೆ



ಚಿತ್ರ ಕೃಪೆ: ಟ್ರೈಬಲ್ ಹೆಲ್ತ್ ಇನಿಶಿಯೇಟಿವ್



ಆದಿವಾಸಿ ಆರೋಗ್ಯ ಇನಿಶಿಯೇಟಿವ್ (ಟಿಎಚ್‌ಐ) ಯೋಜನೆಯಿಂದಾಗಿ ಮಕ್ಕಳ ಕುಪೋಷಣೆ ಮತ್ತು ಶಿಶುಮರಣದ ಪ್ರಮಾಣದಲ್ಲಿ ೭೦%ರಷ್ಟು ಇಳಿಕೆಯಾಗಿದೆ

# ತಮಿಳುನಾಡಿನ ಸಿಟ್ಟಿಲಿಂಗಿ

ಧರ್ಮಪುರಿ ಜಿಲ್ಲೆಯ ಸಿಟ್ಟಿಲಿಂಗಿ ಕಣಿವೆಯ ‘ಮಲೆವಾಸಿ’ ಆದಿವಾಸಿಗಳ ಆರೋಗ್ಯ ರಕ್ಷಣೆಗೆಂದೇ ಆರಂಭವಾದ ಸಂಸ್ಥೆ ‘ಟ್ರೈಬಲ್ ಹೆಲ್ತ್ ಇನಿಶಿಯೇಟಿವ್ (ಟಿಎಚ್‌ಐ). ಕೇರಳದ ಯುವ ಅರಿವಳಿಕೆತಜ್ಞ ಡಾ. ರೆಜಿ ಜಾರ್ಜ್ ಮತ್ತು ಅವರ ಪತ್ನಿ, ಪ್ರಸೂತಿತಜ್ಞೆ ಡಾ. ಲಲಿತಾ ರೆಜಿ ಅವರು ಗಾಂಧೀಜಿಯ ಆದರ್ಶಗಳ ಹಿಂದೆಬಿದ್ದು ೧೯೯೩ರಲ್ಲಿ ಈ ಪುಟ್ಟ ಸಂಸ್ಥೆಯನ್ನು ಆರಂಭಿಸಿದರು. ಮಣ್ಣಿನ ಇಟ್ಟಿಗೆಗಳ ಚಿಕ್ಕ ಮನೆಯಲ್ಲಿ ಕ್ಲಿನಿಕ್ ಮತ್ತು ಹೆರಿಗೆ ಕೋಣೆಯಿಂದ ಪ್ರಾರಂಭವಾದ ಆಸ್ಪತ್ರೆ ಇಂದು ಐಎಸ್‌ಓ ಮಾನ್ಯತೆ ಪಡೆದ, ಆರು ಡಾಕ್ಟರ್‌ಗಳ, ೩೦ ನರ್ಸ್‌ಗಳ ದೊಡ್ಡ ಆಸ್ಪತ್ರೆಯಾಗಿ ಬೆಳೆದಿದೆ. ಸುತ್ತಮುತ್ತಲ ಗ್ರಾಮಗಳ ಒಂದು ಲಕ್ಷ ಜನರಿಗೆ ಪ್ರತಿವರ್ಷ ಆರೋಗ್ಯ ಸೇವೆಯನ್ನು ಒದಗಿಸುತ್ತಿದೆ.

ಊರಿನ ಜನರ ನಿರಂತರ ಸಹಕಾರದಿಂದಾಗಿ ಅಲ್ಲಿ ೧೯೯೩ರಲ್ಲಿ ಶಿಶುಮರಣದ ಪ್ರಮಾಣ ಪ್ರತಿ ಸಾವಿರಕ್ಕೆ ೧೪೭ ಇದ್ದುದು ಈಗ ೨೦ಕ್ಕೆ ಇಳಿದಿದೆ. ಕಳೆದ ಇಡೀ ದಶಕದಲ್ಲಿ ಒಂದೇ ಒಂದು ಮಹಿಳೆಯ ಹೆರಿಗೆ ಸಾವೂ ಸಂಭವಿಸಿಲ್ಲ. ಕುಪೋಷಿತ ಮಕ್ಕಳ ಸಂಖ್ಯೆ ಶೇಕಡಾ ೭೦ರಷ್ಟು ಕಡಿಮೆಯಾಗಿದೆ. ಆರೋಗ್ಯ ಕಾಳಜಿಗಷ್ಟೇ ಟಿಎಚ್‌ಐ ಚಟುವಟಿಕೆ ಸೀಮಿತವಾಗಿಲ್ಲ. ಸಾವಯವ ಬೇಸಾಯ ಸಂಘಟನೆ, ಲಂಬಾಣಿ ಸಮುದಾಯದ ನೆರವಿಗೆ ಕಸೂತಿಕಲೆಗೆ ಉತ್ತೇಜನ, ಮಹಿಳಾ ಉದ್ಯಮಿಗಳಿಗೆ ನೆರವು ನೀಡುವ ಕಾರ್ಯಕ್ರಮ ಇತ್ಯಾದಿಗಳನ್ನೆಲ್ಲ ಈ ಸಂಘಟನೆ ಹಮ್ಮಿಕೊಂಡಿದೆ.

ಊರೊಟ್ಟಿನ ಜನರನ್ನು ಒಳಗೊಳ್ಳುವ ಈ ಪ್ರಕ್ರಿಯೆ ಸ್ಥಳೀಯ ಆಡಳಿತದ ಕೈಯನ್ನೂ ಬಲಪಡಿಸಿದೆ. ಕೋವಿಡ್ ಸಂಕಟಸಮಯದಲ್ಲಿ ಸಿಟ್ಟಿಲಿಂಗಿ ಪಂಚಾಯತ್ ಕೈಗೊಂಡ ಕ್ರಮಗಳು ಇದಕ್ಕೆ ಉತ್ತಮ ಉದಾಹರಣೆ. ಸಾಂಕ್ರಾಮಿಕದ ಸುದ್ದಿ ಹಬ್ಬುತ್ತಲೇ ಪಂಚಾಯತ್ ಅಧ್ಯಕ್ಷೆ ಮಾಧೇಶ್ವರಿ ತುರ್ತು ಸಭೆ ಕರೆದು ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಟಿಎಚ್‌ಐ ಮತ್ತು ಇತರ ಸರಕಾರಿ ಇಲಾಖೆಗಳ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ಷಿಪ್ರ ಕ್ರಮಗಳಿಗೆ ಚಾಲನೆ ನೀಡಿದರು.

**ಸಮಸ್ಯೆ:** ಆರೋಗ್ಯ ಬಿಕ್ಕಟ್ಟುಗಳೊಂದಿಗೆ ವ್ಯವಹರಿಸಲು ಸಾಧ್ಯವಾಗದ ಸಮುದಾಯಗಳು

**ಪರಿಹಾರ:** ಸಮುದಾಯ ಆರೋಗ್ಯ ಸುಧಾರಣೆ



೧೫,೦೦೦ ಜನರಿರುವ ಪಂಚಾಯತದ ಎಲ್ಲ ಹಳ್ಳಿಗಳಲ್ಲೂ ಆಟೊರಿಕ್ಷಾಗಳಲ್ಲಿ ಡಂಗುರ ಹೊಡೆಸಿ ಜನಜಾಗೃತಿ ಕೈಗೊಳ್ಳಲಾಯಿತು. ಸಾರ್ವಜನಿಕ ಸ್ಥಳಗಳಲ್ಲಿ ದೈಹಿಕ ಅಂತರ ಕಾಯ್ದುಕೊಳ್ಳಲು ನಿರ್ದೇಶನ, ಕಿರಾಣಿ ಮತ್ತು ಹೊಟೆಲ್ ಬಿಟ್ಟು ಇತರೆಲ್ಲ ಅಂಗಡಿಗಳಿಗೆ ಬೀಗಮುದ್ರೆ, ಊರಿಗೆ ಮರಳಿದ ವಲಸೆ ಕಾರ್ಮಿಕರಿಗೆ ಕ್ವಾರಂಟೈನ್ ವ್ಯವಸ್ಥೆ, ಆಸ್ಪತ್ರೆಯಲ್ಲಿ ಪ್ರತ್ಯೇಕ 'ಹೊರರೋಗಿಗಳ ವಿಭಾಗ'ವನ್ನು ತೆರೆದಿದ್ದು ಇತ್ಯಾದಿ. ಜೊತೆಜೊತೆಗೇ ಊರಿನ ಜನರಿಗೆಲ್ಲ ಮುಖವಾಡಗಳನ್ನು ಹೊಲಿಯಲು ಸ್ಥಳೀಯ ದರ್ಜಿಗಳಿಗೆ ಕೆಲಸ ಕೊಟ್ಟಿದ್ದು, ಪಡಿತರ ಅಂಗಡಿಗಳಲ್ಲಿ ಟೋಕನ್ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು, ಕೈತೊಳೆಯಲು ಒಲ್ಲದವರಿಗೆ ದಂಡ ಹಾಕಿದ್ದು, ದಿನದಿನವೂ ಸಾಮಾಜಿಕ ಮಾಧ್ಯಮಗಳ ಮೂಲಕವೂ ಕಾಯಿಲೆಯ ಸ್ಥಿತಿಗತಿಗಳ ತಾಜಾ ಸುದ್ದಿಯನ್ನು ಬಿತ್ತರಿಸಿದ್ದು ಇವೆಲ್ಲದರಲ್ಲೂ ಟಿಎಚ್‌ಐ ಸಕ್ರಿಯವಾಗಿ ಪಾಲುಗೊಂಡಿದೆ.

## ಪಾಠಗಳು

ತಮ್ಮ ಆಡಳಿತವನ್ನು ತಾವೇ ನಡೆಸುವಂತೆ ಸಮುದಾಯಕ್ಕೆ ಪ್ರೇರಣೆ ನೀಡಿ, ಆರೋಗ್ಯದ ವಿಷಯದ ಪರಿಜ್ಞಾನ ನೆಲೆಗೊಳ್ಳುವಂತೆ ಮಾಡಿದರೆ ಶಿಶುಮರಣದಂಥ ಕ್ಲಿಷ್ಟ ಸಂದರ್ಭಗಳನ್ನು ಗೆಲ್ಲಲು ಮತ್ತು ಕೋವಿಡ್‌ನಂಥ ಸಂಕಟಸಮಯವನ್ನು ಸಮರ್ಥವಾಗಿ ನಿಭಾಯಿಸುವುದು ಸಾಧ್ಯವಾಗುತ್ತದೆ. ಇಂಥ ಗಳಿಗೆಯಲ್ಲಿ ಹೊರಗಿನ ತಜ್ಞರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಬಹುದು; ಅಷ್ಟೇ ಅಲ್ಲ, ಕೇಂದ್ರೀಕೃತ ವ್ಯವಸ್ಥೆಯ ಮೇಲೆ ಮತ್ತು ಜನರ ಮೇಲೆ ಹೆಚ್ಚಿನ ಹೊರೆ ಬೀಳದಂತೆ ನೋಡಿಕೊಳ್ಳಬಹುದು.

## ಸಂಪರ್ಕಕ್ಕೆ

ರೆಜಿ ಮತ್ತು ಲಲಿತಾ regilalitha@gmail.com / thisittilingi@gmail.com,
9585899061, 9488344325

**ಸಮಸ್ಯೆ**: ಆರೋಗ್ಯ ಬಿಕ್ಕಟ್ಟುಗಳೊಂದಿಗೆ ವ್ಯವಹರಿಸಲು ಸಾಧ್ಯವಾಗದ ಸಮುದಾಯಗಳು

**ಪರಿಹಾರ** : ಸಮುದಾಯ ಆರೋಗ್ಯ ಸುಧಾರಣೆ



# ಕಾಯಿಲೆ ಮತ್ತಿತರ ತುರ್ತು ಸಂದರ್ಭಗಳಲ್ಲಿ ಸ್ಥಳೀಯ ಸಾಮರ್ಥ್ಯವರ್ಧನೆ ಕುರಿತ ಶಿಫಾರಸುಗಳು

- ಪ್ರಾಥಮಿಕ ಆರೋಗ್ಯ ಕೇಂದ್ರದಂಥ ಸ್ಥಳೀಯ ಆರೋಗ್ಯ ಸೇವಾ ಕೇಂದ್ರಗಳ ಸ್ಥಾಪನೆ ಮತ್ತು ಸುಧಾರಣೆ ಆಗುವಂತೆ ನೋಡಿಕೊಳ್ಳಬೇಕು. ಊರೊಟ್ಟಿನ ಆಡಳಿತ, ಸರಕಾರಿ ನೆರವು ಮತ್ತು ಸ್ವಯಂಸೇವಾ ಸಂಘಟನೆಗಳ ಸಹಕಾರದಿಂದ ವಿವಿಧ ಬಗೆಯ ಔಷಧವಿಧಾನ ಮತ್ತು ಶುಶ್ರೂಷಾ ವ್ಯವಸ್ಥೆ ಲಭಿಸುವಂತೆ ನೋಡಿಕೊಳ್ಳಬೇಕು. ಮಾಂಡಲಿಕ ತತ್ವಗಳನ್ನು ಬಳಸಬೇಕು- ಅಂದರೆ ಸ್ಥಳೀಯವಾಗಿ ಮಾಡಬೇಕಾದುದನ್ನೆಲ್ಲ ಮಾಡಬೇಕು. ಅಲ್ಲಿ ಸಾಧ್ಯವೇ ಇಲ್ಲದಿದ್ದರೆ ಮಾತ್ರ ಬ್ಲಾಕ್/ಜಿಲ್ಲೆ/ರಾಜ್ಯ ಮಟ್ಟದ ಸ್ಪೆಶಾಲಿಟಿ ಸೌಲಭ್ಯಗಳ ಮೊರೆ ಹೊಗಬೇಕು.
- ಸಾಂಪ್ರದಾಯಿಕ ಮತ್ತು ಆಧುನಿಕ ಸಾಮಾಜಿಕ ಮಾಧ್ಯಮದಂಥ ಸಂಪರ್ಕ ಸಾಧನಗಳನ್ನು ಬಳಸಿಕೊಂಡು ಸ್ಕೀಮು, ಯೋಜನೆ, ಕಾನೂನು, ನಿಬಂಧನೆ ಮತ್ತು ತುರ್ತು ಕಾರ್ಯಕ್ರಮಗಳ ಕುರಿತ ಪಾರದರ್ಶಕ ಮಾಹಿತಿಗಳ ಪ್ರಸಾರದ ಸಾಮರ್ಥ್ಯ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಲ್ಲಿ ಇರುವಂತೆ ನೋಡಿಕೊಳ್ಳಬೇಕು.
- ಇಂಥ ಸಂಸ್ಥೆಗಳಲ್ಲಿ ದುರ್ಬಲ ವರ್ಗದವರ/ಜನರ ಪರಿಷ್ಕೃತ ಸೂಚಿಪಟ್ಟಿ ಮತ್ತವರ ನಿರ್ದಿಷ್ಟ ಅಗತ್ಯಗಳ ಯಾದಿ ಸದಾ ಸಿದ್ಧವಾಗಿರಬೇಕು.
- ಮಹಿಳೆಯರ ಮತ್ತು ಮಕ್ಕಳ ಅನಿಸಿಕೆ ಮತ್ತು ಅಭಿಪ್ರಾಯಕ್ಕೆ ಅವಕಾಶ ಕೊಡುವ ನಿಟ್ಟಿನಲ್ಲಿ ವಿಶೇಷ ಪ್ರಾಧಾನ್ಯ ಇರಬೇಕು.
- ಸರಕಾರದ ವಿವಿಧ ಇಲಾಖೆಗಳ ಅಧಿಕಾರವರ್ಗ, ಸಿಬ್ಬಂದಿ, ಸ್ವಯಂಸೇವಾ ಸಂಸ್ಥೆ ಮತ್ತು ಸ್ವಯಂ ಆಡಳಿತ ಸಂಸ್ಥೆಗಳ ಪದಾಧಿಕಾರಿಗಳೆಲ್ಲ ತಂತಮ್ಮ ಗೋಪುರಗಳಿಂದ ಹೊರಬಂದು ಒಟ್ಟಾಗಿ ಕೆಲಸ ಮಾಡುವಂತಾಗಬೇಕು.
- ಕೃಷಿ, ಕುಲಕಸುಬು, ನವೋದ್ಯಮವೇ ಮುಂತಾದ ಜೀವನೋಪಾಯಗಳ ಉಸ್ತುವಾರಿ, ಆರೋಗ್ಯ, ಆಹಾರ, ಪೋಷಕಾಂಶಗಳ ನಿರ್ವಹಣೆ ಇವೆಲ್ಲವುಗಳ ಪರಿಕಲ್ಪನೆ ಮತ್ತು ಯೋಜನೆಗಳ ಏಕೀಕೃತ ಸಮಗ್ರ ಚಿತ್ರಣ ಊರಿನ ನಾಗರಿಕರಿಗೆಲ್ಲ ಸಿಗುವಂತಾಗಬೇಕು.
- ಕಲೆ, ಸಂಗೀತ, ಅರೋಗ್ಯ ಪಾಠಗಳೇ ಮುಂತಾದ ಬದುಕಿನ ಶಿಕ್ಷಣ ಬದುಕಿರುವವರೆಗೂ ಸಿಗುತ್ತಿರುವಂತೆ ಸೂಕ್ತ ಕಲಿಕಾ ಪ್ರಯೋಗಗಳು ನಡೆಯುತ್ತಿರಬೇಕು.

ಈ ಪ್ರಕಟನೆಗೆ ಮಾಹಿತಿ ನೀಡಿ ಕೈಜೋಡಿಸಿದವರು: ಅನಂತು, ಸೃಷ್ಟೀ ಬಾಜಪಾಯಿ, ಸೇತುಲಕ್ಷ್ಮಿ ವಿನಯನ್, ಪೂರ್ಣಿಮಾ ಉಪಾಧ್ಯಾಯ, ಸಂಗೀತಾ ಶ್ರೀರಾಮ್, ಇಷ್ತಿಯಾಕ್ ಅಹ್ಮದ್, ಅಲೆಕ್ಸ್ ಜೆನ್ಸೆನ್, ಸುಜಾತಾ ಪದ್ಮನಾಭನ್, ಇಲಾಂಗೊ ರಂಗಸ್ವಾಮಿ, ಸುಜಿತ್ ಸಿನ್ಹಾ, ಮಿಹಿರ್ ಶಾ, ಅದಿತಿ ಸಜ್ವಾನ್, ಸುರೇಶ್ ಛಾಂಗಾ, ಗಿಜ್ಸ್ ಸ್ಪೂರ್, ಜೂಹಿ ಪಾಂಡೆ, ಗೋಪಿ ಶಂಕರಸುಬ್ರಮಣಿ, ಸುಹಾಸ್ ಕೊಲ್ಹೇಕರ್. ಸಮನ್ವಯಕಾರರು: ಆಶಿಶ್ ಕೊಠಾರಿ. ವಿನ್ಯಾಸ ಮತ್ತು ಪುಟಜೋಡಣೆ: ನವೀದ್ ದಾದನ್

**ಶೀರ್ಷಿಕೆ:** ವಿಕಲ್ಪ್ ಸಂಗಮ್, 'ಸಾಮಾನ್ಯ'ರ ಅಸಾಮಾನ್ಯ ಸಾಧನೆಗಳು- ಮಹಾಸಾಂಕ್ರಾಮಿಕ ಮತ್ತು ಲಾಕ್‌ಡೌನ್ ಆಚಿನ ನೋಟಗಳು- ಸಂಪುಟ೧, ವಿಕಲ್ಪ್ ಸಂಗಮ್ ಕೇಂದ್ರತAಡ, ಪುಣೆ, ಮೇ ೨೦೨೦.

ಇದೊಂದು ಹಕ್ಕುಮುಕ್ತ ಪ್ರಕಟನೆ. ವಾಣಿಜ್ಯೋದ್ದೇಶ ಇಲ್ಲದ ಯಾರು ಬೇಕಿದ್ದರೂ ತಮ್ಮ ಸ್ವಂತದ ಹಕ್ಕುಗಳನ್ನು ಸ್ಥಾಪಿಸದೆ ಇದರ ಪ್ರತಿಗಳನ್ನು ವಿತರಿಸಬಹುದು. ಹಾಗೆ ವಿತರಿಸುವಾಗ ಇದೇ ನಿಬಂಧನೆಗಳನ್ನೂ ಜೊತೆಗೇ ಪ್ರಕಟಿಸಬೇಕು. ಮೂಲವನ್ನು ಸ್ಮರಿಸಿದರೆ ಒಳ್ಳೆಯದು.

ವಿಕಲ್ಪ್ ಸಂಗಮ್ ಎಂದರೆ: ಮನುಷ್ಯರ ಮತ್ತು ಪರಿಸರದ ಕಲ್ಯಾಣಕ್ಕಾಗಿ ನ್ಯಾಯಯುತ, ಸಮಭಾಜಕ ಮತ್ತು ಸುಸ್ಥಿರ ಮಾರ್ಗಗಳನ್ನು ಶೋಧಿಸ ಹೊರಟ ಎಲ್ಲ ಸ್ವಯಂಪ್ರೇರಿತ ಸಂಸ್ಥೆಗಳು, ಚಳವಳಿಗಳು ಮತ್ತು ವ್ಯಕ್ತಿಗಳನ್ನು ಒಗ್ಗೂಡಿಸುವ ಒಂದು ವೇದಿಕೆ. ಇದು ಅಸಮಾನತೆ ಮತ್ತು ಅನ್ಯಾಯಗಳನ್ನು ಪೋಷಿಸುವ ಈಗಿನ ಅಭಿವೃದ್ಧಿ ಮಾದರಿಗಳನ್ನು ತಿರಸ್ಕರಿಸುತ್ತದೆ. ಬದಲಿಗೆ ಪರ್ಯಾಯ ಮಾದರಿಗಳು, ದೃಷ್ಟಿಕೋನಗಳು ಮತ್ತು ಪ್ರಾತ್ಯಕ್ಷಿಕೆಗಳು ಎಲ್ಲಾದರೂ ಇವೆಯೇ ಎಂದು ಶೋಧಿಸುತ್ತಿರುತ್ತದೆ. ದೇಶದ ವಿವಿಧ ಭಾಗಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು ೬೦ ಸಂಘಟನೆಗಳು ಮತ್ತು ಚಳವಳಿಗಳು ಈ ಸಂಗಮ್‌ನ ಕೇಂದ್ರ ತಂಡದಲ್ಲಿವೆ. ಅವುಗಳ ಪಟ್ಟಿಯನ್ನು ಮುಂದೆ ಕೊಡಲಾಗಿದೆ.

ಹೆಚ್ಚಿನ ಮಾಹಿತಿಗೆ: http://www.vikalpsangam.org/about/

www.vikalpsangam.org

- ACCORD (Tamil Nadu)
- Alliance for Sustainable and Holistic Agriculture (national)
- Alternative Law Forum (Bengaluru)
- Ashoka Trust for Research in Ecology and the Environment (Bengaluru)
- BHASHA (Gujarat)
- Bhoomi College (Bengaluru)
- Blue Ribbon Movement (Mumbai)
- Centre for Education and Documentation (Mumbai)
- Centre for Environment Education (Gujarat)
- Centre for Equity Studies (Delhi)
- CGNetSwara (Chhattisgarh)
- Chalakudypuzha Samrakshana Samithi / River Research Centre (Kerala)
- ComMutiny: The Youth Collective (Delhi)
- Deccan Development Society (Telangana)
- Deer Park (Himachal Pradesh)
- Development Alternatives (Delhi)
- Dharamitra (Maharashtra)
- Ekta Parishad (several states)
- Ektha (Chennai)
- EQUATIONS (Bengaluru)
- Gene Campaign (Delhi)
- Greenpeace India (Bengaluru)
- Health Swaraaj Samvaad (national)
- Ideosync (Delhi)
- Jagori Rural (Himachal Pradesh)
- Kalpavriksh (Maharashtra)
- Knowledge in Civil Society (national)
- Kriti Team (Delhi)
- Ladakh Arts and Media Organisation (Ladakh)
- Local Futures (Ladakh)
- Maati (Uttarakhand)
- Mahila Kisan Adhikar Manch (national)
- Mazdoor Kisan Shakti Sangathan (Rajasthan)
- National Alliance of Peoples' Movements (national)
- Nirangal (Tamil Nadu)
- North East Slow Food and Agrobiodiversity Society (Meghalaya)
- Peoples' Science Institute (Uttarakhand)
- Revitalising Rainfed Agriculture Network (national)
- reStore (Chennai)
- Sahjeevan (Kachchh)
- Sambhaavnaa (Himachal Pradesh)
- Samvedana (Maharashtra)
- Sangama (Bengaluru)
- Sangat (Delhi)
- School for Democracy (Rajasthan)
- School for Rural Development and Environment (Kashmir)
- Shikshantar (Rajasthan)
- Snow Leopard Conservancy India Trust (Ladakh)
- Social Entrepreneurship Association (Tamil Nadu)
- SOPPECOM (Maharashtra)
- South Asian Dialogue on Ecological Democracy (Delhi)
- Students' Environmental and Cultural Movement of Ladakh (Ladakh)
- Thanal (Kerala)
- Timbaktu Collective (Andhra Pradesh)
- Titli Trust (Uttarakhand)
- Tribal Health Initiative (Tamil Nadu)
- URMUL (Rajasthan)
- Vrikshamitra (Maharashtra)
- Watershed Support Services and Activities Network (Andhra Pradesh/Telangana)